# ಕರ್ನಾಟಕ ಸರ್ಕಾರ

## ಕೈಪಿಡಿ

(ಮಾಹಿತಿ ಹಕ್ಕು ಅಧಿನಿಯಮ 2005 ರ ಸಕ್ಷನ್ 4 (1) (ಬಿ) ಮೇರೆಗೆ)

ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

2005

# *ಭಾಗ – I*

**(i)** *(ಅ) ಸಂಸ್ಥಾ ವಿವರಗಳು:*

ರಾಜ್ಯದ ಪರಿಸರ ಮತ್ತು ಜೀವಿ ಪರಿಸ್ಥಿತಿಗಳ ಉನ್ನತೀಕರಣದ ಉದ್ದೇಶದಿಂದ 1981 ರಲ್ಲಿ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯನ್ನು ಸ್ಥಾಪಿಸಲಾಯಿತು. ಇಲಾಖೆಯು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಂಗವಾಗಿರುತ್ತದೆ. ಇಲಾಖೆಯು ಕ್ಯಾಬಿನೆಟ್ ದರ್ಜೆಯ ಸಚಿವರ ಆಡಳಿತ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರು ಇಲಾಖೆಯ ಮುಖ್ಯಸ್ಥರಾಗಿದ್ದು, ಕಾರ್ಯದರ್ಶಿ (ಪರಿಸರ) ರವರು ಪರಿಸರ ಮತ್ತು ಜೀವಿಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯಲ್ಲಿನ ವೈಜ್ಞಾನಾಧಿಕಾರಿಗಳನ್ನೊಳಗೊಂಡ ತಾಂತ್ರಿಕ ಕೋಶ, ಅಧೀನ ಕಾರ್ಯದರ್ಶಿ ಹಾಗೂ ಶಾಖಾ ಸಿಬ್ಬಂಧಿ, ಜಿಲ್ಲೆಗಳಲ್ಲಿನ ಪ್ರಾದೇಶಿಕ ನಿರ್ದೇಶಕರುಗಳು (ಪರಿಸರ), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೆರೆ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಜೀವಿ ವೈವಿಧ್ಯತೆ ಮಂಡಳಿ, ಇಂಡೋ ನಾರ್ವೆಜಿಯನ್ ಎನ್‌ವಿರಾನ್‌ಮೆಂಟ್ ಪ್ರೋಗ್ರಾಮ್ ಸಚಿವಾಲಯ, ಪರಿಸರ ನಿರ್ವಹಣೆ ಹಾಗೂ ನೀತಿ ಸಂಶೋಧನಾ ಸಂಸ್ಥೆ – ಇವುಗಳು ಇಲಾಖೆಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುವಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೆರವಾಗುತ್ತಾರೆ. ಇಲಾಖೆಯ ಸಂಘಟನಾ ಸ್ವರೂಪದ ನಕ್ಷೆಯನ್ನು ಅನುಬಂಧ – I ರಲ್ಲಿ ನೀಡಲಾಗಿದೆ.

*(ಆ) ಇಲಾಖೆಯ ಕಾರ್ಯಗಳು*

**ಇಲಾಖೆಯ ಪ್ರಮುಖ ಕೆಲಸ ಕಾರ್ಯಗಳ ಸಾರಾಂಶ ಕೆಳಕಂಡಂತಿವೆ:**

1. ರಾಜ್ಯದಲ್ಲಿನ ಜೀವಿಪರಿಸ್ಥಿತಿ ಮತ್ತು ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಮೇಲಿನ ನೀತಿ ನಿರೂಪಣೆಗೆ ಅನುವು ಮಾಡಿಕೊಡುವುದು.
2. ಪರಿಸರ ಕಾಯ್ದೆ, ವಾಯು ಮತ್ತು ಜಲಕಾಯ್ದೆಗಳು ಹಾಗೂ ಅವುಗಳ ಅಡಿಯಲ್ಲಿ ಹೊರಡಿಸಲಾಗಿರುವ ಅಧಿಸೂಚನೆಗಳ ಶಾಸನಬದ್ಧ ಅನುಷ್ಠಾನವನ್ನು ಖಾತ್ರಿ ಪಡಿಸುವುದು.
3. ಅಗತ್ಯಾನುಸಾರ ರಾಜ್ಯ ಪರಿಸರ ವರದಿ ತಯಾರಿಸುವುದು.
4. ಜೀವಿಪರಿಸ್ಥಿತಿ ಮತ್ತು ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಅಧ್ಯಯನ, ಸಂಶೋಧನೆ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುವುದು ಹಾಗೂ ಅನುಕೂಲ ಕಲ್ಪಿಸುವುದು.
5. ಜೀವಿಪರಿಸ್ಥಿತಿ ಮತ್ತು ಪರಿಸರಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಬಜೆಟ್ ಮತ್ತು ಬಜೆಟೇತರ ಮೂಲಗಳಿಂದ ಸಂಪನ್ಮೂಲ ಸಂಗ್ರಹಣೆ.
6. ಇಕೋ ಕ್ಲಬ್‌ಗಳನ್ನು ಸ್ಥಾಪಿಸಿ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು ಜಾರಿಗೊಳಿಸುವುದು.
7. ಕೆಳಕಂಡ ಅಧೀನ ಕಛೇರಿಗಳ/ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಮೇಲುಸ್ತುವಾರಿ –

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಶಾಸನಬದ್ಧ ಸಂಸ್ಥೆ)
ಆ) ಕೆರೆ ಅಭಿವೃದ್ಧಿ ಪ್ರಾಧಿಕಾರ.
ಇ) ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (EMPRI)
ಈ) ಪರಿಸರ ಮಾಹಿತಿ ಸೇವೆಗಳು/ಕೇಂದ್ರ (ENVIS NODE/CENTRE)
ಉ) ಕರ್ನಾಟಕ ಜೀವಿ ವೈವಿದ್ಯತೆ ಮಂಡಳಿ
ಊ) ಇಂಡೋ ನಾರ್ವೇಜಿಯನ್ ಎನ್‌ವಿರಾನ್‌ಮೆಂಟ್ ಪ್ರೋಗ್ರಾಂ (INEP)
ಋ) ರಾಷ್ಟ್ರೀಯ ಕೆರೆ ಸಂರಕ್ಷಣಾ ಯೋಜನೆ (NLCP)
ೠ) ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆ (NRCP)
ಎ) ಬಳ್ಳಾರಿ, ಬೆಳಗಾಂ, ಗುಲ್ಬರ್ಗಾ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿನ ಪ್ರಾದೇಶಿಕ ಕಛೇರಿಗಳು.

ಇ) ***ಇಲಾಖೆಯ ಕರ್ತವ್ಯಗಳು***

ವಿವಿಧ ಪರಿಸರ ಕಾಯ್ದೆಗಳನ್ನು ನಿರ್ವಹಿಸುವ ಮುಖ್ಯ ಹೊಣೆಯನ್ನು ಇಲಾಖೆ ಹೊಂದಿರುತ್ತದೆ. ಇಲಾಖೆಯು ಕೆಳಕಂಡ ಕಾಯ್ದೆ ಹಾಗೂ ನಿಯಮಾವಳಿಗಳನ್ನು ಅಧೀನ ಕಛೇರಿಗಳು ಹಾಗೂ ಸಂಸ್ಥೆಗಳ ಮೂಲಕ ನಿರ್ವಹಿಸುತ್ತದೆ:

ಅ) ಜಲ (ಮಾಲಿನ್ಯ ನಿವಾರಣಾ ಹಾಗೂ ನಿಯಂತ್ರಣ) ಕಾಯ್ದೆ, 1974
ಆ) ವಾಯು (ಮಾಲಿನ್ಯ ನಿವಾರಣಾ ಹಾಗೂ ನಿಯಂತ್ರಣ) ಕಾಯ್ದೆ, 1981
ಇ) ಪರಿಸರ (ಸಂರಕ್ಷಣೆ) ಕಾಯ್ದೆ, 1986 ಹಾಗು

ಮೇಲ್ಕಂಡ ಕಾಯ್ದೆಗಳಡಿಯಲ್ಲಿ ಹೊರಡಿಸಲಾಗಿರುವ ನಿಯಮಾವಳಿಗಳು.

ಭಾರತ ಸರ್ಕಾರವು ಪರಿಸರ (ಸಂರಕ್ಷಣೆ) ಕಾಯ್ದೆ, 1986 ಅಡಿ ಹೊರಡಿಸಿರುವ ಕೆಳಕಂಡ ನಿಯಮಾವಳಿಗಳು ಸಹ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಬರುತ್ತವೆ:

1. ಅಪಾಯಕಾರಿ ತ್ಯಾಜ್ಯ ವಸ್ತುಗಳ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು, 1989 ಹಾಗೂ ತಿದ್ದುಪಡಿ ನಿಯಮ 2000 ಹಾಗು 2003
2. ಅಪಾಯಕಾರಿ ರಾಸಾಯನಿಕ ವಸ್ತುಗಳ ತಯಾರಿಕೆ, ದಾಸ್ತಾನು ಮತ್ತು ಆಮದು ನಿಯಮಗಳು, 1989
3. ಅಪಾಯಕಾರಿ ಸೂಕ್ಷ್ಮ ಜೀವಾಣುಗಳ ಮತ್ತು ವಂಶದಾಯಿಕವಾಗಿ ಬರುವ ಜೀವಾಣುಗಳು ಅಥವಾ ಜೀವಕೋಶಗಳ ತಯಾರಿಕೆ, ಬಳಕೆ, ಆಮದು ರಫ್ತು ಮತ್ತು ದಾಸ್ತಾನು ನಿಯಮಗಳು, 1989
4. ಪರಿಸರ ಪರಿಣಾಮ ನಿರ್ಧರಣಾ ಅಧಿಸೂಚನೆ, 1994, 1999 ಹಾಗೂ 2002
5. ಜೈವಿಕ ವೈದ್ಯಕೀಯ ತ್ಯಾಜ್ಯ ವಸ್ತುಗಳ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು, 1998 ಹಾಗೂ ತಿದ್ದುಪಡಿ ನಿಯಮ 2000 ಹಾಗು 2003.
6. ಪುನರ್ ಬಳಕೆ ಪ್ಲಾಸ್ಟಿಕ್‌ಗಳ (ತಯಾರಿಕೆ ಮತ್ತು ಬಳಕೆ) ನಿಯಮಗಳು 1999 ಹಾಗೂ ತಿದ್ದುಪಡಿ ನಿಯಮ 2003
7. ಶಬ್ಧ ಮಾಲಿನ್ಯ (ನಿಭಂದನೆ ಮತ್ತು ನಿಯಂತ್ರಣ) ನಿಯಮಗಳು 2000 ಹಾಗೂ ತಿದ್ದುಪಡಿ ನಿಯಮ 2002

8. ಮುನಿಸಿಪಲ್ ಘನರೂಪದ ತ್ಯಾಜ್ಯವಸ್ತುಗಳ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು 2000
9. ಕರಾವಳಿ ಭಾಗಗಳನ್ನು ಕರಾವಳಿ ನಿಯಂತ್ರಣ ವಲಯ ಎಂದು ಘೋಷಿಸಲಾಗಿರುವ ಅಧಿಸೂಚನೆ ಹಾಗೂ ಕರಾವಳಿ ನಿಯಂತ್ರಣ ವಲಯದಲ್ಲಿನ ಚಟುವಟಿಕೆಗಳ ಬಂಧನೆ.
10. ಬ್ಯಾಟರೀಸ್ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು 2001
11. ರಾಸಾಯನಿಕ ಅಪಘಾತಗಳು (ತುರ್ತು ಯೋಜನೆ, ಸಿದ್ಧತೆ ಮತ್ತು ಪ್ರತಿ ಸ್ಪಂದಿಸುವ) ನಿಯಮಗಳು 1996
12. ಜೈವಿಕ ವೈವಿಧ್ಯ ಅಧಿನಿಯಮ, 2002 ಮತ್ತು ಜೈವಿಕ ವೈವಿಧ್ಯ ನಿಯಮಗಳು 2004.

## *ii)* *ಅಧಿಕಾರಿ /ಸಿಬ್ಬಂಧಿಗೆ ಪ್ರದತ್ತವಾಗಿರುವ ಅಧಿಕಾರ ಹಾಗೂ ನಿರ್ವಹಿಸಬೇಕಾದ ಕರ್ತವ್ಯಗಳು:*

ಪರಿಸರ ಕಾಯ್ದೆಗಳು ಅಂದರೆ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ, 1974, ವಾಯು (ಮಾಲಿನ್ಯ ನಿವಾರಣೆ ಹಾಗು ನಿಯಂತ್ರಣ) ಕಾಯ್ದೆ 1981 ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ 1986 –ಕರ್ನಾಟಕ ರಾಜ್ಯಕ್ಕೆ ಅನ್ವಯಿತವಾದಂತೆ – ಹಾಗು ಈ ಕಾಯ್ದೆಗಳಡಿ ರಚಿಸಲಾಗಿರುವ ನಿಯಮಾವಳಿಗಳು ಇಲಾಖೆಯ ಅಧಿಕಾರಿಗಳು/ಸಿಬ್ಬಂಧಿಗಳು ನಿರ್ವಹಿಸಬೇಕಾದ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ಧರಿಸುತ್ತವೆ. ಈ ಅಧಿಕಾರ ಹಾಗು ಕರ್ತವ್ಯಗಳನ್ನು ಪರಿಸರ ಕಾಯ್ದೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಹಾಗು ಸದರಿ ಕಾಯ್ದೆ/ ನಿಯಮಗಳ ಪಾಲನೆಗೆ ಬದ್ಧಗೊಳಿಸುವ ದೃಷ್ಠಿಕೋನದಿಂದ ಚಲಾಯಿಸಲಾಗುತ್ತದೆ ಮತ್ತು ನಿರ್ವಹಿಸಲಾಗುತ್ತದೆ. ಪ್ರದತ್ತವಾದ ಅಧಿಕಾರದ ಹಾಗೂ ಕರ್ತವ್ಯ ನಿರ್ವಹಣೆಯ ಮುಖ್ಯ ಅಂಶಗಳು ಕೆಳಗಿನಂತಿದೆ:

1. ವಿವಿಧ ಪರಿಸರ ಕಾಯ್ದೆಗಳು ಹಾಗು ಅವುಗಳಡಿ ರಚಿಸಲಾಗಿರುವ ನಿಯಮಾವಳಿಗಳಡಿಯಲ್ಲಿ ವಿವಿಧ ಅಧಿಕಾರಿಗಳಿಗೆ ಪ್ರದತ್ತವಾಗಿರುವ ಶಾಸನ ಬದ್ಧ ಅಧಿಕಾರವನ್ನು ಚಲಾಯಿಸುವುದು.
2. ಪರಿಸರ ಮತ್ತು ಜೀವಿಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ನೀತಿ ನಿರೂಪಣೆ ಹಾಗೂ ಯೋಜನೆಗಳ ತಯಾರಿಕೆಯಲ್ಲಿ ಸರ್ಕಾರಕ್ಕೆ ನೆರವಾಗುವುದು.
3. ಪರಿಸರ ವಿಮೋಚನೆಗಾಗಿ (Environmental Clearance) ಸಲ್ಲಿಸಲ್ಪಡುವ ಯೋಜನೆಗಳು/ಪ್ರಸ್ತಾವಗಳನ್ನು ತಾಂತ್ರಿಕವಾಗಿ ಪರಿಶೋಧಿಸಿ ರಾಜ್ಯ ಪರಿಸರ ವಿಮೋಚನಾ ಸಮಿತಿ (State Environmental Clearance Committee) ಗೆ ನೆರವಾಗುವುದು.
4. ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣೆ ಪ್ರಾಧಿಕಾರಕ್ಕೆ ಸಲ್ಲಿಸಲ್ಪಡುವ ಯೋಜನೆಗಳು/ಪ್ರಸ್ತಾವನೆಗಳನ್ನು ಪರಿಶೀಲಿಸಿ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯ ನಿಯಮಗಳನ್ನು ಜಾರಿಗೊಳಿಸುವ ದಿಸೆಯಲ್ಲಿ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣೆ ಪ್ರಾಧಿಕಾರಕ್ಕೆ (KSCZMA) ನೆರವಾಗುವುದು.
5. ರಾಜ್ಯ ಪರಿಸರ ಸ್ಥಿತಿ ವರದಿ ತಯಾರಿಸುವುದು.
6. ಸ್ಥಳೀಯ ಪರಿಸರ ವಿಷಯಗಳನ್ನು ನಿಭಾಯಿಸಲು ಸ್ಥಳೀಯ ಸಂಸ್ಥೆಗಳ ಸಾಮರ್ಥ್ಯ ಬಲಪಡಿಸುವುದು.
7. ಸ್ಥಳೀಯ ಸಂಸ್ಥೆಗಳ ಸೇವೆಯ ಮಾನ್ಯ ಹಾಗೂ ಪ್ರೋತ್ಸಾಹಕ್ಕಾಗಿ ಪರಿಸರ ಪ್ರಶಸ್ತಿಗಳನ್ನು ನೀಡಿ ಗೌರವಿಸುವುದು.

8. ಜೀವಿ ಪರಿಸ್ಥಿತಿ ಹಾಗು ಪರಿಸರ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಕಾರ್ಯ ಚಟುವಟಿಕೆಗಳು, ಅಧ್ಯಯನ ಹಾಗೂ ತಿಳುವಳಿಕೆ ಕಾರ್ಯಕ್ರಮಗಳಿಗೆ ಅನುಕೂಲ ಕಲ್ಪಿಸುವುದು ಹಾಗೂ ಸಮನ್ವಯಗೊಳಿಸುವುದು.
9. ಜೀವಿ ಪರಿಸ್ಥಿತಿ ಮತ್ತು ಪರಿಸರಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಬಜೆಟ್ ಮತ್ತು ಬಜೆಟೇತರ ಮೂಲಗಳಿಂದ ಸಂಪನ್ಮೂಲ ಸಂಗ್ರಹಣೆ.
10. ಇಕೋ ಕ್ಲಬ್‌ಗಳನ್ನು ಸ್ಥಾಪಿಸಿ ಭಾರತ ಸರ್ಕಾರದ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು ಜಾರಿಗೊಳಿಸುವುದು.
11. ರಾಷ್ಟ್ರೀಯ ಕೆರೆ ಸಂರಕ್ಷಣಾ ಯೋಜನೆಯನ್ನು ಅನುಷ್ಠಾನಗೊಳಿಸುವುದು.
12. ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯನ್ನು ಜಾರಿಗೊಳಿಸುವುದು.
13. ವ್ಯವಸ್ಥಿತವಾಗಿ ಕಾರ್ಯ ನಿರ್ವಹಣೆ ಹಾಗೂ ಪರಿಸರ ಧ್ಯೇಯಗಳ ಈಡೇರಿಕೆಗಾಗಿ ಕೆಳಕಂಡ ಅಧೀನ ಕಛೇರಿ/ಸಂಸ್ಥೆಗಳ – ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೆರೆ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ರಾಜ್ಯ ಜೀವಿ ವೈವಿಧ್ಯತೆ ಮಂಡಳಿ, ಇಂಡೋ ನಾರ್ವೇಜಿಯನ್ ಎನವಿರಾನ್‌ಮೆಂಟ್ ಪ್ರೋಗ್ರಾಮ್, ಪರಿಸರ ವ್ಯವಸ್ಥಾಪನೆ ಹಾಗೂ ನೀತಿ ಸಂಶೋಧನಾ ಸಂಸ್ಥೆಗಳ ಮೇಲುಸ್ತುವಾರಿ.

***<u>ಇಲಾಖೆಯ ಅಧಿಕಾರಿಗಳ/ ಸಿಬ್ಬಂಧಿಯ ಕರ್ತವ್ಯಗಳು ಕೆಳಗಿನಂತಿದೆ.</u>***

**1.** ***<u>ಸರ್ಕಾರದ ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ)</u>***

ಸರ್ಕಾರದ ಕಾರ್ಯದರ್ಶಿ (ಜೀವಿಶಾಸ್ತ್ರ ಮತ್ತು ಪರಿಸರ) ರವರು ಪರಿಸರ (ಸಂರಕ್ಷಣೆ) ಕಾಯ್ದೆ, 1986 ಹಾಗು ಅದರಡಿ ರಚಿಸಲಾಗಿರುವ ನಿಯಮಾವಳಿಗಳು ಹಾಗೂ ಸದರಿ ಕಾಯ್ದೆಯಡಿ ಹೊರಡಿಸಲಾಗಿರುವ ಅಧಿಸೂಚನೆಗಳನುಸಾರ ಶಾಸನಬದ್ಧ ಅಧಿಕಾರವನ್ನು ಚಲಾಯಿಸುತ್ತಾರೆ. ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ 1974, ವಾಯು (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ 1981 ಹಾಗು ಅವುಗಳಡಿ ರಚಿಸಲಾಗಿರುವ ನಿಯಮಾವಳಿಗಳನ್ನು ಜಾರಿಗೊಳಿಸುವುದು; ಕಾಲಕಾಲಕ್ಕೆ ಇಲಾಖೆಯ ಯೋಜನೆಗಳ ಅನುಷ್ಠಾನವನ್ನು ಪರಾಮರ್ಶಿಸುವುದು; ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ರಾಜ್ಯ ಜೀವಿ ವೈವಿಧ್ಯತೆ ಮಂಡಳಿ, ಕೆರೆ ಅಭಿವೃದ್ಧಿ ಪ್ರಾಧಿಕಾರ ಹಾಗೂ ಪರಿಸರ ವ್ಯವಸ್ಥಾಪನೆ ಹಾಗೂ ನೀತಿ ಸಂಶೋಧನಾ ಸಂಸ್ಥೆ ಇವುಗಳ ಕಾರ್ಯ ನಿರ್ವಹಣೆಯ ನಿಗಾವಣೆ ಹಾಗೂ ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆ, ರಾಷ್ಟ್ರೀಯ ಕೆರೆ ಸಂರಕ್ಷಣಾ ಯೋಜನೆ ಹಾಗು ಇನ್ನಿತರ ಯೋಜನೆಗಳಿಗೆ ಸೂಕ್ತ ಆರ್ಥಿಕ ನೆರವಿಗಾಗಿ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದೊಡನೆ ಸಂಪರ್ಕವಿರಿಸಿಕೊಳ್ಳುವುದು. ಕಾರ್ಯದರ್ಶಿಗಳು ರಾಜ್ಯ ಮಟ್ಟದ ಅಧಿಕಾರಯುತ ಸಮಿತಿಗೆ ಹಾಗೂ ಕರ್ನಾಟಕ ರಾಜ್ಯ ಕರಾವಳಿ ವಲಯ ವ್ಯವಸ್ಥಾಪನೆ ಪ್ರಾಧಿಕಾರದ (KSCZMA) ಮುಂದೆ ತರಲಾಗುವ ಪ್ರಸ್ತಾವನೆಗಳನ್ನು ಅಂತಿಮಗೊಳಿಸಿ ಪ್ರಸ್ತಾವನೆಗಳನ್ನು ಪರಿಗಣಿಸಿ ನಿರ್ಣಯ ತೆಗೆದುಕೊಳ್ಳಲು ಸದರಿ ಸಮಿತಿಗೆ ಹಾಗೂ ಪ್ರಾಧಿಕಾರಕ್ಕೆ ನೆರವಾಗುವರು.

***ತಾಂತ್ರಿಕ ವಿಭಾಗ:***

## 2. ***ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ)***

ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ) ರವರು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಕಾರ್ಯದರ್ಶಿಗಳು ವಹಿಸುವ ಕರ್ತವ್ಯಗಳು ಹಾಗೂ ಹೊಣೆಗಾರಿಕೆಗಳನ್ನು ನಿರ್ವಹಿಸುವರು. ವೈಜ್ಞಾನಿಕ ಸಮಿತಿ, ಪರಿಸರ ವಿಮೋಚನಾ ಸಮಿತಿ ಹಾಗೂ ಕರ್ನಾಟಕ ರಾಜ್ಯ ಕರಾವಳಿ ವ್ಯವಸ್ಥಾಪನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿ ಸಂಬಂಧಿತ ಕಡತಗಳನ್ನು ಪರಿಶೀಲಿಸಿ ಆದೇಶಕ್ಕಾಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಮಂಡಿಸುವುದಲ್ಲದೆ ಪರಿಸರ (ಸಂರಕ್ಷಣೆ) ಕಾಯ್ದೆ 1986, ಜಲ ಕಾಯ್ದೆ, ವಾಯು ಕಾಯ್ದೆಗಳನುಸಾರ ತಾಂತ್ರಿಕ ಅಭಿಪ್ರಾಯವನ್ನು ನೀಡುವರು. ಇದಲ್ಲದೇ ಸಾಮಾನ್ಯ, ತಾಂತ್ರಿಕ ಹಾಗೂ ಆಡಳಿತಾತ್ಮಕ ವಿಷಯಗಳು, ನ್ಯಾಯಾಲಯ ಹಾಗು ವಿಧಾನ ಮಂಡಲಕ್ಕೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಿ ಇಲಾಖೆಯ ಕಾರ್ಯದರ್ಶಿಗಳಿಗೆ ಮಂಡಿಸುವರು. ಇಲಾಖೆಯ ವೈಜ್ಞಾನಿಕ ಅಧಿಕಾರಿಗಳು ನೀಡುವ ತಾಂತ್ರಿಕ ಹಿನ್ನೆಲೆಯ ಅಂಶಗಳನ್ನು ಪರಿಶೀಲಿಸಿ ಅಭಿಪ್ರಾಯ ಸಹಿತವಾಗಿ ಸರ್ಕಾರದ ಕಾರ್ಯದರ್ಶಿಗಳಿಗೆ ಮಂಡಿಸುವರು.

### *3. ಶ್ರೀ ಕೆ. ಗಿರೀಶ್, ವೈಜ್ಞಾನಿಕ ಅಧಿಕಾರಿ (ದರ್ಜೆ –1)*

ಅ) ವಾಯು ಮಾಲಿನ್ಯ
ಆ) ಶಬ್ಧ ಮಾಲಿನ್ಯ
ಇ) ಪ್ಲಾಸ್ಟಿಕ್
ಈ) ಮುನಿಸಿಪಲ್ ಘನ ತ್ಯಾಜ್ಯ ವಸ್ತು
ಉ) ಜಿಲ್ಲಾ ಪರಿಸರ ಸಂರಕ್ಷಣಾ ಪ್ರಾಧಿಕಾರ
ಊ) ಪರಿಸರ ಸಾರ್ವಜನಿಕ ಅಹವಾಲು ಸ್ವೀಕಾರ ಸಮಿತಿ
ಋ) ಕರಾವಳಿ ವಲಯ ನಿಯಂತ್ರಣಕ್ಕೆ ಸಂಬಂಧಿಸಿದ ವಿಷಯಗಳು

### 4. ***ಶ್ರೀ ಹೆಚ್.ಜಿ.ಸತ್ಯಮೂರ್ತಿ, ವೈಜ್ಞಾನಿಕ ಅಧಿಕಾರಿ (ದರ್ಜೆ – 1)***

ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ) ರವರಿಗೆ ಮುಂದಿನ ಪರಿಶೀಲನೆಗಾಗಿ ಮಂಡಿಸುವರು.

ಅ) ಜೀವಿ ವೈವಿಧ್ಯತೆಗೆ ಸಂಬಂಧಿಸಿದ ಎಲ್ಲ ವಿಷಯಗಳು
ಆ) ಕರ್ನಾಟಕ ರಾಜ್ಯ ಜೀವಿ ವೈವಿಧ್ಯತೆ ಮಂಡಳಿಗೆ ಸಂಬಂಧಿಸಿದ ವಿಷಯಗಳು
ಇ) ಪರಿಸರ ಸೂಕ್ಷ್ಮ ಪ್ರದೇಶಗಳು, ಪ್ರದೇಶಗಳಿಗೆ ಬಯೋ ಸ್ಪಿಯರ್ ರಿಸರ್ವ್‌ಗಳಿಗೆ ಸಂಬಂಧಿಸಿದ ವಿಷಯಗಳು
ಈ) ಜೌಗು ಪ್ರದೇಶ ಹಾಗೂ ಮ್ಯಾನ್‌ಗ್ರೂವ್‌ಗೆ ಸಂಬಂಧಿಸಿದ ವಿಷಯಗಳು
ಉ) ಎನ್‌ವಿಸ್ ನೋಡ್/ಕೇಂದ್ರಕ್ಕೆ ಸಂಬಂಧಿಸಿದ ವಿಷಯಗಳು

5. ***ಶ್ರೀ ವಿ. ವಿಶ್ವನಾಥ್, ವೈಜ್ಞಾನಿಕ ಅಧಿಕಾರಿ (ದರ್ಜೆ – 2)***

ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ) ರವರಿಗೆ ಮುಂದಿನ ಪರಿಶೀಲನೆಗಾಗಿ ಮಂಡಿಸುವರು.

**ಅ)** ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆ (NRCP) ಹಾಗೂ ರಾಷ್ಟ್ರೀಯ ಕೆರೆ ಸಂರಕ್ಷಣಾ ಯೋಜನೆ (NLCP)
ಆ) ರಾಜ್ಯ ಜೀವಿ ವೈವಿಧ್ಯತೆ ಮಂಡಳಿಗೆ ಸಂಬಂಧಿಸಿದ ವಿಷಯಗಳು
ಇ) ಇಕೋ ಕ್ಲಬ್
ಈ) ಅಪಾಯಕಾರಿ ತ್ಯಾಜ್ಯ ವಸ್ತು
ಉ) ಕೆರೆ ಅಭಿವೃದ್ಧಿ ಪ್ರಾಧಿಕಾರ

6. ***ಶ್ರೀ ದೊಡ್ಡ ಅಶ್ವತ್ಥ ನಾರಾಯಣ ಸ್ವಾಮಿ, ವೈಜ್ಞಾನಿಕ ಅಧಿಕಾರಿ (ದರ್ಜೆ – 2)***

ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ) ರವರಿಗೆ ಮುಂದಿನ ಪರಿಶೀಲನೆಗಾಗಿ ಮಂಡಿಸುವರು.

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಸಿಕ ವರದಿ ಹಾಗೂ ಮಂಡಳಿಯ ಸಭೆಯ ನಡವಳಿ/ಸಿಎಜಿ ವರದಿ
ಆ) ಪರಿಸರ ಪ್ರಶಸ್ತಿಗಳು
ಇ) ಏಕ ಗವಾಕ್ಷಿ ಏಜನ್ಸಿ (Singl Window Agency)
ಈ) ಬ್ಯಾಟರಿಗಳು
ಉ) ಹಾರು ಬೂದಿ (Fly Ash)
ಊ) ಪರಿಸರ ವಿಮೋಚನಾ ಸಮಿತಿ
ಋ) ವೈದ್ಯಕೀಯ ತ್ಯಾಜ್ಯ ವಸ್ತು

***<u>ಆಡಳಿತ ವಿಭಾಗ:</u>***

**ಅಧೀನ ಕಾರ್ಯದರ್ಶಿ (ಪರಿಸರ)**

ಇಲಾಖೆಗೆ ಸಂಬಂಧಿಸಿದ ಆಡಳಿತಾತ್ಮಕ ವಿಷಯಗಳು ಹಾಗೂ ಪರಿಸರ ಕಾಯ್ದೆಗಳು ಅಂದರೆ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ 1974, ವಾಯು (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ, 1981 ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ 1986 ಹಾಗೂ ಅವುಗಳಡಿ ಹೊರಡಿಸಲಾಗಿರುವ ನಿಯಮಾವಳಿಗಳು /ಅಧಿಸೂಚನೆಗಳು ಹಾಗೂ ಇತರೆ ವಿಷಯಗಳ ನಿರ್ವಹಣೆಯಲ್ಲಿ ಕಾರ್ಯದರ್ಶಿ (ಪರಿಸರ) ರವರಿಗೆ ನೆರವಾಗುವರು. ಸಂಬಂಧಿಸಿದ ಕಡತ/ದಾಖಲೆಗಳನ್ನು ಸಂದರ್ಭಾನುಸಾರವಾಗಿ ಹಿರಿಯ ನಿರ್ದೇಶಕರು (ತಾಂತ್ರಕ ಕೋಶ)/ಕಾರ್ಯದರ್ಶಿ (ಪರಿಸರ) ರವರಿಗೆ ಮಂಡಿಸುವರು.

**ಶಾಖಾಧಿಕಾರಿ ಪರಿಸರ – ಎ**

ಪರಿಸರ–ಎ ಶಾಖೆಯಲ್ಲಿ ನಿರ್ವಹಿಸುವ ವಿಷಯಗಳು ಅಂದರೆ ವಿಧಾನಸಭೆಗೆ ಸಂಬಂಧಿಸಿದ ವಿಷಯಗಳು, ನ್ಯಾಯಾಲಯ ಪ್ರಕರಣಗಳು, ಅನುದಾನ ಹಂಚಿಕೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಆಯವ್ಯಯ, ಎಂಎಂಆರ್/ಕೆ.ಡಿ.ಪಿ ಸಭೆ, ವೈದ್ಯಕೀಯ ತ್ಯಾಜ್ಯ ವಸ್ತು ನಿಯಮಾವಳಿ, ಘನ ತ್ಯಾಜ್ಯ ವಸ್ತು ನಿಯಮಾವಳಿ, ಘ್ಲಾಸ್ಟಿಕ್‌ಗೆ ಸಂಬಂದಿಸಿದ ವಿಷಯಗಳು ಹಾಗೂ ಇತರೆ ಸಂಬಂಧಿಸಿದ ವಿಷಯಗಳ ನಿರ್ವಹಣೆಯಲ್ಲಿ ಅಧೀನ ಕಾರ್ಯದರ್ಶಿ (ಪರಿಸರ) ರವರಿಗೆ ನೆರವಾಗುವರು. ಸಂಬಂಧಿತ ಕಡತ/ದಾಖಲೆಗಳನ್ನು ಅಧೀನ ಕಾರ್ಯದರ್ಶಿ (ಪರಿಸರ) ರವರಿಗೆ ಮಂಡಿಸುವರು.

***ಶಾಖಾಧಿಕಾರಿ ಪರಿಸರ –ಬಿ***

ಪರಿಸರ–ಬಿ ಶಾಖೆಯಲ್ಲಿ ನಿರ್ವಹಿಸುವ ವಿಷಯಗಳು, ಅಂದರೆ ಪರಿಸರ ವಿಮೋಚನೆಗೆ ಸಂಬಂಧಿಸಿದ ವಿಷಯಗಳು, ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿ ಹೊರಡಿಸಲಾಗಿರುವ ಅಧಿಸೂಚನೆಗಳು, ಮಿಸಲೇನಿಯಸ್ ವಿಷಯಗಳು, ಏಕಗವಾಕ್ಷಿ ಏಜನ್ಸಿ, ಭಾರತ ಸರ್ಕಾರ ಹಾಗೂ ವಿಶ್ವಬ್ಯಾಂಕ್ ಅನುದಾನಿತ ಯೋಜನೆಗಳು, ವಿಧಾನ ಪರಿಷತ್ತಿಗೆ ಸಂಬಂಧಿಸಿದ ವಿಷಯಗಳು, ಕೆರೆ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಜೀವಿ ವೈವಿಧ್ಯತೆ ಮಂಡಳಿ, ಪರಿಸರ ವ್ಯವಸ್ಥಾಪನಾ ಹಾಗೂ ನೀತಿ ಸಂಶೋಧನಾ ಸಂಸ್ಥೆ ಹಾಗೂ ಇತರೆ ವಿಷಯಗಳ ನಿರ್ವಹಣೆಯಲ್ಲಿ ಅಧೀನ ಕಾರ್ಯದರ್ಶಿಗಳು (ಪರಿಸರ) ರವರಿಗೆ ನೆರವಾಗುವರು.

***ಹಿರಿಯ ಸಹಾಯಕ (ಪರಿಸರ–ಎ)***

ನ್ಯಾಯಾಲಯಕ್ಕೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುವರು.

***ಹಿರಿಯ ಸಹಾಯಕ (ಪರಿಸರ–ಬಿ)***

ಭಾರತ ಸರ್ಕಾರ ಹಾಗೂ ವಿಶ್ವಬ್ಯಾಂಕ್ ಅನುದಾನಿತ ಯೋಜನೆಗಳು, ಪರಿಸರ (ಸಂರಕ್ಷಣೆ) ಕಾಯ್ದೆ 1986 ರಡಿ ಹೊರಡಿಸಲಾಗಿರುವ ನಿಯಮಾವಳಿಗಳು/ ಅಧಿಸೂಚನೆಗಳಿಗೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುವರು.

***ಸಹಾಯಕ–1 (ಪರಿಸರ –ಎ)***

ವಿಧಾನ ಸಭೆಗೆ ಸಂಬಂಧಿಸಿದ ವಿಷಯಗಳು, ತರಭೇತಿ, ಘನ ತ್ಯಾಜ್ಯ ವಸ್ತು, ವೈದ್ಯಕೀಯ ತ್ಯಾಜ್ಯ ವಸ್ತು, ಘ್ಲಾಸ್ಟಿಕ್ ಹಾಗೂ ಇತರೆ ವಿಷಯಗಳನ್ನು ನಿರ್ವಹಿಸುವರು.

***ಸಹಾಯಕ-2 (ಪರಿಸರ -ಎ)***

ಅನುದಾನಕ್ಕೆ ಸಂಬಂಧಿಸಿದ ವಿಷಯಗಳು, ಆಯವ್ಯಯ, ಎಂಎಂಆರ್/ಕೆ.ಡಿ.ಪಿ. ಸಭೆ ಹಾಗೂ ಇತರೆ ವಿಷಯಗಳನ್ನು ನಿರ್ವಹಿಸುವರು.

***ಸಹಾಯಕ-1 (ಪರಿಸರ -ಬಿ)***

ಪರಿಸರ ವಿಮೋಚನೆಗೆ ಸಂಬಂಧಿಸಿದ ವಿಷಯಗಳು, ಏಕಗವಾಕ್ಷಿ ಏಜನ್ಸಿ ಹಾಗೂ ಇತರೆ ವಿಷಯಗಳನ್ನು ನಿರ್ವಹಿಸುವರು.

***ಸಹಾಯಕ-2 (ಪರಿಸರ -ಬಿ)***

ಮಿಸಲೇನಿಯಸ್ ವಿಷಯಗಳು ಹಾಗೂ ದೂರುಗಳು

***ಶೀಘ್ರಲಿಗಾರರು/ಬೆರಳಚ್ಚುಗಾರರು :***

ಸಚಿವಾಲಯ ಕೈಪಿಡಿ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶಗಳು, ಸುತ್ತೋಲೆ, ಅಧಿಕೃತ ಜ್ಞಾಪನಗಳಲ್ಲಿ ನಮೂದಿತವಾಗಿರುವಂತೆ ಕೆಲಸ ಕಾರ್ಯಗಳನ್ನು ನಿರ್ವಹಿಸುವರು.

***ಕಿರಿಯ ಸಹಾಯಕ (ಪರಿಸರ ಎ ಮತ್ತು ಬಿ)***

ಶಾಖೆಗಳಲ್ಲಿನ ಕಡತ/ದಾಖಲೆಗಳ ಚಾಲನೆಗೆ ಹೊಣೆಗಾರರಾಗಿರುತ್ತಾರೆ.

***ಜಮೇದಾರ್ / ದಲಾಯತ್ (ಪರಿಸರ ಎ ಮತ್ತು ಬಿ)***

ಸಚಿವಾಲಯ ಕೈಪಿಡಿ ಹಾಗೂ ಆಗಿಂದಾಗ್ಯೆ ಹೊರಡಿಸಲಾಗುವ ಆದೇಶಗಳು, ಸುತ್ತೋಲೆ, ಜ್ಞಾಪನಗಳಲ್ಲಿ ನಮೂದಿತವಾಗಿರುವ ಕೆಲಸ ಕಾರ್ಯಗಳನ್ನು ನಿರ್ವಹಿಸುವರು.

ಮೇಲಿನಂತೆ ಅಧಿಕಾರದ ಚಾಲನೆ ಹಾಗೂ ಕರ್ತವ್ಯಗಳ ನಿರ್ವಹಣೆಯಲ್ಲಿ ಕಾರ್ಯವಿಧಾನದ ಕೈಪಿಡಿಗಳು ಅಂದರೆ ಸಚಿವಾಲಯ ಕೈಪಿಡಿ ಸರ್ಕಾರ ವ್ಯವಹಾರ ನಿಯಮ, ಸರ್ಕಾರದ ವ್ಯವಹಾರ ಹಂಚಿಕೆ ನಿಯಮ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಸ್ಥಾಯೀ ಆದೇಶಗಳು, ಸುತ್ತೋಲೆ, ಜ್ಞಾಪನಗಳು ಮಾರ್ಗದರ್ಶಕವಾಗಿರುತ್ತವೆ.

***iii) <u>ನಿರ್ಣಯ ತೆಗೆದುಕೊಳ್ಳಲು ಪಾಲಿಸುವ ಕಾರ್ಯವಿಧಾನ, ಮೇಲ್ವಿಚಾರಣೆ ಹಾಗೂ ಹೊಣೆಗಾರಿಕೆ ಸೇರಿದಂತೆ</u> :***

ನಿರ್ಣಯ ತೆಗೆದುಕೊಳ್ಳಲು ಪಾಲಿಸುವ ಕಾರ್ಯವಿಧಾನ ಹಾಗೂ ನಿರ್ಣಯ ತೆಗೆದುಕೊಳ್ಳುವ ಅಧಿಕಾರಿಗಳ ಮಟ್ಟವನ್ನು ಸಚಿವಾಲಯ ಕೈಪಿಡಿ, ಸರ್ಕಾರದ ವ್ಯವಹಾರ ನಿಯಮ ಹಾಗೂ ವ್ಯವಹಾರ ಹಂಚಿಕೆ ನಿಯಮ, ಆಗಿಂದಾಗ್ಯೆ ಹೊರಡಿಸಲಾಗುವ ಆದೇಶಗಳು, ಸುತ್ತೋಲೆಗಳಲ್ಲಿನ ಸೂಚನೆಗಳು, ಜ್ಞಾಪನಗಳು ನಿಗಧಿಪಡಿಸುತ್ತವೆ. ಇಲಾಖೆಯ ಅಧಿಕಾರಿ/ಸಿಬ್ಬಂದಿಯು ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ

ಇಲಾಖೆರವರ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಮೇಲ್ವಿಚಾರಣೆ ಹಾಗೂ ಹೊಣೆಗಾರಿಕೆಯ ನಿರ್ಧರಣೆಯಲ್ಲಿ ಕಾರ್ಯದರ್ಶಿ (ಪರಿಸರ), ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ), ವಿವಿಧ ವಿಷಯ ವಿಭಾಗದ ವೈಜ್ಞಾನಿಕ ಅಧಿಕಾರಿಗಳು, ಅಧೀನ ಕಾರ್ಯದರ್ಶಿ (ಪರಿಸರ) ಹಾಗೂ ಶಾಖಾಧಿಕಾರಿಗಳು, ಎ ಮತ್ತು ಬಿ, ಇಲಾಖೆಯ ಆಡಳಿತಾತ್ಮಕ ಸಂಸ್ಥಾ ಚೌಕಟ್ಟಿನಲ್ಲಿರುತ್ತಾರೆ. ಪ್ರತಿ ಅಧಿಕಾರಿ / ಸಿಬ್ಬಂದಿಯ ಹೊಣೆಗಾರಿಕೆಗಳನ್ನು ಕಾರ್ಯವಿಧಾನದ ಕೈಪಿಡಿ, ಸರ್ಕಾರದ ವ್ಯವಹಾರ ನಿಯಮ ಹಾಗೂ ವ್ಯವಹಾರ ಹಂಚಿಕೆ ನಿಯಮ, ಸ್ಥಾಯೀ ಆದೇಶಗಳು, ಸುತ್ತೋಲೆಗಳು ಹಾಗೂ ಜ್ಞಾಪನಗಳು, ಆಡಳಿತ ಹಾಗೂ ವಿತ್ತೀಯ ಪ್ರತ್ಯಾಯೋಜನೆ ಆದೇಶಗಳು ನಿರ್ಧರಿಸಿರುತ್ತವೆ.

ಮುಖ್ಯ ನಿರ್ಣಯಗಳನ್ನು ತೆಗೆದುಕೊಳ್ಳಲು ಪಾಲಿಸಲಾಗುವ ಕಾರ್ಯ ವಿಧಾನವನ್ನು ಕೆಳಗೆ ವಿವರಿಸಲಾಗಿದೆ:

**(ಅ) *ಪರಿಸರ ವಿಮೋಚನೆ ವಿಷಯದಲ್ಲಿ ಅನುಸರಿಸಲಾಗುವ ಕಾರ್ಯವಿಧಾನ:***

ಪರಿಸರ ವಿಮೋಚನೆಗಾಗಿ ಇಲಾಖೆಯಲ್ಲಿ ಸ್ವೀಕೃತವಾದ ಯೋಜನಾ ಪ್ರಸ್ತಾವನೆಯನ್ನು ವೈಜ್ಞಾನಾಧಿಕಾರಿಗಳ ನೆರವಿನಿಂದ ಹಿರಿಯ ನಿರ್ದೇಶಕರು (ತಾಂತ್ರಿಕಕೋಶ) ಪರಿಶೀಲಿಸುವರು. ಕಾರ್ಯದರ್ಶಿ (ಪರಿಸರ) ರವರು ಎರಡನೇ ಸುತ್ತಿನ ಪರಿಶೀಲನೆಯ ನಂತರದಲ್ಲಿ ಪ್ರಸ್ತಾವನೆಯನ್ನು ಪರಿಸರ ವಿಮೋಚನಾ ಸಮಿತಿಯ ಪರಿಶೀಲನೆ ಹಾಗೂ ನಿರ್ಧಾರಕ್ಕಾಗಿ ಮಂಡಿಸಲಾಗುವುದು. ಸಮಿತಿಯ ನಿರ್ಧಾರ ಪಡೆದ ಮೇಲೆ ಪರಿಸರ ವಿಮೋಚನೆ ನೀಡುವ/ತಿರಸ್ಕರಿಸುವ ಆದೇಶವನ್ನು ಪರಿಸರ ಸಚಿವಾಲಯ ಹೊರಡಿಸುತ್ತದೆ. ಪರಿಸರ ವಿಮೋಚನಾ ಸಮಿತಿಯು ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತದೆ:

| | | |
|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, 404, 4 ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560 001. | ಅಧ್ಯಕ್ಷರು |
| 2. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, 4 ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560 001. | ಸದಸ್ಯರು |
| 3. | ಸರ್ಕಾರದ ಕಾರ್ಯದರ್ಶಿ, (ಜೀವಿಶಾಸ್ತ್ರ ಮತ್ತು ಪರಿಸರ) 709, 7ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560 001. | ಸದಸ್ಯರು |
| 4. | ಸರ್ಕಾರದ ಕಾರ್ಯದರ್ಶಿ, (ಅರಣ್ಯ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, 7 ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560 001. | ಸದಸ್ಯರು |
| 5. | ಸರ್ಕಾರದ ಕಾರ್ಯದರ್ಶಿ (ಭಾರಿ ನೀರಾವರಿ) ಜಲ ಸಂಪನ್ಮೂಲ ಇಲಾಖೆ, 640, 6 ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560 001. | ಸದಸ್ಯರು |
| 6. | ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. | ಸದಸ್ಯರು |

| | | |
|---|---|---|
| 7. | ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. | ಸದಸ್ಯರು |
| 8. | ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. | ಸದಸ್ಯರು |
| 9. | ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನಂ.49, ಪರಿಸರ ಭವನ, ಚರ್ಚ್ ರಸ್ತೆ, ಬೆಂಗಳೂರು – 560 001. | ಸದಸ್ಯರು |
| 10. | ಫ್ಯಾಕ್ಟರೀಸ್ ಮತ್ತು ಬಾಯ್ಲರ್ಸ್‌ಗಳ ಮುಖ್ಯ ಪರಿವೀಕ್ಷಕರು, ಕಾರ್ಮಿಕ ಭವನ, ಇಂಡಸ್ಟ್ರಿಯಲ್ ಕೈಗಾರಿಕಾ ತರಭೇತಿ ಸಂಕೀರ್ಣ, ಬನ್ನೇರು ಘಟ್ಟ ರಸ್ತೆ, ಬೆಂಗಳೂರು – 560 029. | ಸದಸ್ಯರು |
| 11. | ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. | ಸದಸ್ಯರು |
| 12. | ವಲಯ ಅಧಿಕಾರಿ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ನಂ. 6, ವೆಸ್ಟ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರಂ, 2 ನೇ ಹಂತ, ರಾಜಾಜಿನಗರ, ಬೆಂಗಳೂರು – 560 086. | ಸದಸ್ಯರು |
| 13. | ನಿರ್ದೇಶಕರು, ನಗರ ಯೋಜನಾ ಇಲಾಖೆ, 113, ನೆಲಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು – 560 001. | ಸದಸ್ಯರು |
| 14. | ಕರ್ನಾಟಕ ಔಷಧಿ ನಿಯಂತ್ರಕರು, ಪ್ಯಾಲೆಸ್ ರಸ್ತೆ, ಬೆಂಗಳೂರು – 560 001 | ಸದಸ್ಯರು |
| 15. | ಶ್ರೀ ಪಿ.ಆರ್. ಮಲ್ಲಿಕಾರ್ಜುನ, ಕಲಾಧಾರ, ನಂ.62/1, 6ನೇ ಮೈನ್, 6ನೇ ಕ್ರಾಸ್, ಚಾಮರಾಜ ಪೇಟೆ, ಬೆಂಗಳೂರು – 560 018. | ಸದಸ್ಯರು |
| 16. | ಪ್ರೋ. ಎ.ಕೆ. ಲಹರಿ, ಡಿಪಾರ್ಟ್‌ಮೆಂಟ್ ಆಫ್ ಮೆಟಲರ್ಜಿ, ಇಂಡಿಯನ್ ಇನ್ಸಟಿಟ್ಯೂಟ್ ಆಫ್ ಸೈನ್ಸ್, ಮಲ್ಲೇಶ್ವರಂ, ಬೆಂಗಳೂರು – 560 012. | ಸದಸ್ಯರು |
| 17. | ಶ್ರೀ ಪಿ.ಪಿ. ನಾಗೇಶ್ವರ ರಾವ್, ನಿರ್ದೇಶಕರು, RRSSC, ಅಂತರಿಕ್ಷ ಭವನ, ನ್ಯೂ ಬಿಇಎಲ್ ರಸ್ತೆ, ಐಎಸ್ಆರ್ಒ, ಬೆಂಗಳೂರು – 560 094. | ಸದಸ್ಯರು |
| 18. | ಡಾ. ವಸುಂಧರ ಕಾಮತ್, ಪ್ರೋ ಆಫ್ ಪ್ರಿವೆಂಟೀವ್ ಅಂಡ್ ಸೋಷಿಯಲ್ ಮೆಡಿಸಿನ್, ವಿಕ್ಟೋರಿಯಾ ಆಸ್ಪತ್ರೆ, ಫೋರ್ಟ್, ಬೆಂಗಳೂರು – 560 002. | ಸದಸ್ಯರು |

| | | |
|---|---|---|
| 19. | ಡಾ:ಆರ್ ಶೈಲಜ, ಸಮನ್ವಯಾಧಿಕಾರಿ, ಸೆಂಟರ್ ಫಾರ್ ಎನ್‌ವಿರಾನ್‌ಮೆಂಟ್ ಎಜುಕೇಷನ್, 143, ಕಾಮತ್‌ಮೆನ್‌ಷನ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560 001. | ಸದಸ್ಯರು |
| 20. | ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ) (ಜೀವಿಶಾಸ್ತ್ರ ಮತ್ತು ಪರಿಸರ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, 710, 7ನೇ ಮಹಡಿ, ಮಹುಮಹಡಿ ಕಟ್ಟಡ, ಬೆಂಗಳೂರು 560 001. | ಸದಸ್ಯ ಕಾರ್ಯದರ್ಶಿ |

***<u>(ಆ) ಕರಾವಳಿ ನಿಯಂತ್ರಣ ವಲಯ ನಿರ್ವಹಣೆಯ ಸಂದರ್ಭದಲ್ಲಿ ನೀಡಲಾಗುವ ವಿಮೋಚನೆಗೆ ಪಾಲಿಸಲಾಗುವ ಕಾರ್ಯ ವಿಧಾನ :</u>***

ಕರಾವಳಿ ನಿಯಂತ್ರಣ ವಲಯ ವಿಷಯಕ್ಕೆ ಸಂಬಂಧಿಸಿದ ಯೋಜನಾ ಪ್ರಸ್ತಾವನೆಗಳು ಜಿಲ್ಲಾ ಪ್ರಾದೇಶಿಕ ನಿರ್ದೇಶಕರು (ಪರಿಸರ) ಮೂಲಕ ಇಲಾಖೆಯಲ್ಲಿ ಸ್ವೀಕೃತವಾಗುತ್ತವೆ. ಕೆಲವು ಸಲ ಯೋಜನಾ ಪ್ರಸ್ತಾವನೆಯು ಇಲಾಖೆಯಲ್ಲಿ ನೇರವಾಗಿ ಸ್ವೀಕೃತವಾಗುತ್ತದೆ. ಅಂತಹ ಪ್ರಸ್ತಾವನೆಗಳನ್ನು ಸ್ಥಳೀಯ ಮಟ್ಟದಲ್ಲಿ ಸತ್ಯಾಸತ್ಯತೆಯ ಪರಿಶೋಧನೆಗಾಗಿ ಪ್ರಾದೇಶಿಕ ನಿರ್ದೇಶಕರು (ಪರಿಸರ) ರವರಿಗೆ ಕಳುಹಿಸಲಾಗುತ್ತದೆ. ಪ್ರಾದೇಶಿಕ ನಿರ್ದೇಶಕರು (ಪರಿಸರ) ರವರಿಂದ ವರದಿ ಸ್ವೀಕರಿಸಿದ ನಂತರದಲ್ಲಿ ಸಚಿವಾಲಯ ಮಟ್ಟದಲ್ಲಿ ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ) ಪ್ರಸ್ತಾವನೆಯನ್ನು ತಾಂತ್ರಿಕ ಕೋಶದ ವೈಜ್ಞಾನಾಧಿಕಾರಿಗಳ ನೆರವಿನಿಂದ ಪರಿಶೋಧಿಸುವರು. ಕಾರ್ಯದರ್ಶಿ(ಪರಿಸರ) ರವರು ಎರಡನೇ ಸುತ್ತಿನಲ್ಲಿ ಪರಿಶೋಧಿಸಿದ ನಂತರದಲ್ಲಿ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣೆ ಪ್ರಾಧಿಕಾರದ (KSCZMA) ಮುಂದೆ ಪರಿಶೋಧನೆ ಹಾಗೂ ನಿರ್ಧಾರಕ್ಕಾಗಿ ಮಂಡಿಸಲಾಗುವುದು. ಪ್ರಾಧಿಕಾರದ ಸಹಮತಿಯನ್ನು ಪಡೆದು ಪ್ರಸ್ತಾವನೆಯನ್ನು ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಪರಿಶೀಲನೆಗಾಗಿ ಹಾಗೂ ಅಗತ್ಯ ಆದೇಶ ಹೊರಡಿಸಲು ಕಳುಹಿಸಲಾಗುವುದು. ರಾಜ್ಯ ಪ್ರಾಧಿಕಾರದ ನಿಯಮಾವಳಿಗೆ ಒಳಪಡುವ ಪ್ರಸ್ತಾವನೆಯಾಗಿದ್ದಲ್ಲಿ ಸಚಿವಾಲಯದ ಮಟ್ಟದಲ್ಲಿ ಸಹಮತಿ ನೀಡುವ/ ತಿರಸ್ಕರಿಸುವ ಆದೇಶವನ್ನು ಹೊರಡಿಸಲಾಗುತ್ತದೆ.

**<u>(ಇ) ಪರಿಸರ ಪ್ರಶಸ್ತಿ ಆಯ್ಕೆಗೆ ಪಾಲಿಸಲಾಗುವ ಕಾರ್ಯ ವಿಧಾನ:</u>**

ಹಲವಾರು ವ್ಯಕ್ತಿಗಳು ಹಾಗು ಸಂಸ್ಥೆಗಳು ರಾಜ್ಯದ ಪರಿಸರ ಪರಿಸ್ಥಿತಿಯನ್ನು ಸಂರಕ್ಷಿಸುವ ಹಾಗೂ ಉತ್ತಮಪಡಿಸುವ ದಿಸೆಯಲ್ಲಿ ಕಾರ್ಯೋನ್ಮುಖರಾಗಿರುತ್ತಾರೆ. ಅಂತಹ ವ್ಯಕ್ತಿಗಳು/ಸಂಸ್ಥೆಗಳನ್ನು ಸರ್ಕಾರ ಮಾನ್ಯ ಮಾಡಿದಲ್ಲಿ ವ್ಯಕ್ತಿಗಳು/ಸಂಸ್ಥೆಗಳು ಈ ವಲಯದಲ್ಲಿ ಹೆಚ್ಚಿನ ಕೊಡುಗೆ ನೀಡಲು ಉತ್ತೇಜನ ದೊರೆಯುವುದಲ್ಲದೆ, ಇತರರು ಈ ಬಗೆಯ ಕಾರ್ಯ ಚಟುವಟಿಕೆಗಳನ್ನು ಪರಿಸರ ಸಂರಕ್ಷಣೆಯ ಹಿತದೃಷ್ಠಿಯಿಂದ ಕೈಗೊಳ್ಳಲು ಉತ್ತೇಜನವಾಗಬಲ್ಲದು ಎಂಬುದು ರಾಜ್ಯ ಸರ್ಕಾರದ ನಿಲುವಾಗಿರುತ್ತದೆ.

ಪ್ರತಿವರ್ಷ 5ನೇ ಜೂನ್ ರಂದು ಆಚರಿಸಲ್ಪಡುವ ವಿಶ್ವ ಪರಿಸರ ದಿನಾಚರಣೆ ಸಂದರ್ಭದಲ್ಲಿ ಆಯ್ಕೆಗೊಂಡ ವ್ಯಕ್ತಿಗಳು/ ಸಂಸ್ಥೆಗಳಿಗೆ ರಾಜೀವ್ ಗಾಂಧಿ ಪರಿಸರ ಪ್ರಶಸ್ತಿ ಎಂದು

ಕರೆಯಲ್ಪಡುವ ರಾಜ್ಯ ಪರಿಸರ ಪ್ರಶಸ್ತಿಗಳನ್ನು ನೀಡಲಾಗುವುದು. ಈ ಪ್ರಶಸ್ತಿಯು ಒಂದು ಲಕ್ಷ ರೂಪಾಯಿ ನಗದು ಬಹುಮಾನ ಹಾಗು ಪ್ರಪತ್ರ ಒಳಗೊಂಡಿರುತ್ತದೆ. ರಾಜ್ಯ ಸರ್ಕಾರ ರಚಿಸುವ ಆಯ್ಕೆ ಸಮಿತಿಯು ಈ ಪ್ರಶಸ್ತಿಗೆ ಅರ್ಹ ವ್ಯಕ್ತಿ/ಸಂಸ್ಥೆಗಳನ್ನು ಆಯ್ಕೆ ಮಾಡುತ್ತದೆ. ಪರಿಸರ ಹಾಗೂ ಸಂಬಂಧಿಸಿದ ವಿಷಯಗಳಲ್ಲಿ ಅಸಾಧಾರಣ ಸೇವೆಗಾಗಿ ಬೆಂಗಳೂರು ನಗರ ಹಾಗೂ ಗ್ರಾಮೀಣ ಜಿಲ್ಲೆ, ಮಲೆನಾಡು, ಹಳೆ ಮೈಸೂರು, ಕರಾವಳಿ, ಮುಂಬೈ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕ ಪ್ರದೇಶಗಳಿಂದ ತಲಾ ಓರ್ವ ವ್ಯಕ್ತಿ/ಸಂಸ್ಥೆಯನ್ನು ಆಯ್ಕೆ ಮಾಡಲಾಗುತ್ತದೆ.

## *(ಈ) ಇಕೋ ಕ್ಲಬ್‌ಗಳ ಸ್ಥಾಪನೆ :*

ಭಾರತ ಸರ್ಕಾರದ ರಾಷ್ಟ್ರೀಯ ಹಸಿರು ಪಡೆ ಯೋಜನೆಯಡಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಇಕೋ ಕ್ಲಬ್‌ಗಳನ್ನು ಸ್ಥಾಪಿಸಲಾಗಿದೆ. ಈ ಕ್ಲಬ್‌ಗಳು 27 ರೆವಿನ್ಯೂ ಜಿಲ್ಲೆಗಳು ಹಾಗು 7 ಶಿಕ್ಷಣ ಜಿಲ್ಲೆಗಳಲ್ಲಿ ಸ್ಥಾಪನೆಗೊಂಡಿವೆ. ಪರಿಸರದ ಬಗ್ಗೆ ಶಾಲಾ ಮಕ್ಕಳಲ್ಲಿ ಜಾಗ್ರತೆ ಮೂಡಿಸುವುದು ಯೋಜನೆಯ ಮುಖ್ಯ ಧ್ಯೇಯವಾಗಿರುತ್ತದೆ. ಪ್ರತಿ ಇಕೋ ಕ್ಲಬ್‌ಗೆ ಭಾರತ ಸರ್ಕಾರದಿಂದ ರೂ. 1,000/- ಅನುದಾನ ದೊರೆಯುತ್ತದೆ.

## i) *ಶಾಲೆಗಳನ್ನು ಆಯ್ಕೆ ಮಾಡುವ ವಿಧಾನ:*

- ಎಲ್ಲ ಕೇಂದ್ರೀಯ ವಿದ್ಯಾಲಯಗಳು, ನವೋದಯ ವಿದ್ಯಾಲಯಗಳು ಹಾಗೂ ಸಿಬಿಎಸ್‌ಸಿ ಹಾಗೂ ಐಸಿಎಸ್‌ಸಿ ಪಠ್ಯ ಕ್ರಮದ ಎಲ್ಲ ಶಾಲೆಗಳು.
- ಪ್ರತಿ ಜಿಲ್ಲೆಯಲ್ಲಿ 100 ಶಾಲೆಗಳು. ಮಾಧ್ಯಮಿಕ ಹಾಗೂ ಹಿರಿಯ ಮಾಧ್ಯಮಿಕ ಶಾಲೆಗಳಿಗೆ ಪ್ರಾಶಸ್ತ್ಯ ನೀಡಲಾಗುತ್ತದೆ. ಮಾಧ್ಯಮಿಕ ಹಾಗು ಹಿರಿಯ ಮಾಧ್ಯಮಿಕ ಶಾಲೆಗಳು ಜಿಲ್ಲೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಬಹುದು.
- ಇಕೋ ಕ್ಲಬ್‌ಗಳನ್ನು ನಡೆಸುತ್ತಿರುವ ಅಥವಾ ಇತರೆ ಪರಿಸರ ಸಂಬಂಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಶಾಲೆಗಳಿಗೆ ಪ್ರಾಶಸ್ತ್ಯ ದೊರೆಯುವುದು.

## (ii) *ಪದ್ಧತಿ (Methodology)*

- ಯೋಜನೆಯನ್ನು ಸದಸ್ಯ ಶಾಲೆಗಳಲ್ಲಿ ಸ್ಥಾಪಿಸಲಾದ ಇಕೋ ಕ್ಲಬ್‌ಗಳ ಮೂಲಕ ಜಾರಿಗೊಳಿಸಲಾಗುವುದು.
- ಪ್ರತಿ ಇಕೋ ಕ್ಲಬ್‌ನಲ್ಲಿ ಪರಿಸರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಆಸಕ್ತಿ ಹೊಂದಿರುವ 30-50 ಶಾಲಾ ಮಕ್ಕಳಿರುತ್ತಾರೆ.
- ಪ್ರತಿ ಇಕೋ ಕ್ಲಬ್‌ಗಳು ಸದಸ್ಯ ಶಾಲೆಯ ಶಿಕ್ಷಕರುಗಳ ಪೈಕಿ ಆಯ್ಕೆ ಮಾಡಲಾದ ಪರಿಸರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಆಸಕ್ತಿ ಹೊಂದಿರುವ ಇನ್‌ಛಾರ್ಜ್ ಶಿಕ್ಷಕರ ಮೇಲ್ವಿಚಾರಣೆಯಲ್ಲಿರುತ್ತದೆ.
- ಪ್ರತಿ ಇಕೋ ಕ್ಲಬ್‌ಗೆ ಆಯ್ದ ಭಾಷೆಯಲ್ಲಿ ಸಂಪನ್ಮೂಲ (ರಿಸೋರ್ಸ್) ಕಿಟ್ ಅನ್ನು ನೀಡಲಾಗುವುದು ಹಾಗು ಪ್ರತಿ ವರ್ಷ ರೂ.1000/- ಸಾಂಕೇತಿಕ ಅನುದಾನವನ್ನು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನೀಡಲಾಗುವುದು.

- ❖ ಇನ್‌ಚಾರ್ಜ್ ಶಿಕ್ಷಕರ ತರಭೇತಿಯ ಮೇಲ್ವಿಚಾರಣೆ ಹಾಗೂ ವ್ಯವಸ್ಥೆ ಹಾಗೂ ಜಿಲ್ಲಾ ಮಟ್ಟದಲ್ಲಿ ಯೋಜನೆಯ ಅನುಷ್ಠಾನದ ಮೇಲೆ ಕಾಲಕಾಲಕ್ಕೆ ನಿಗಾವಹಿಸಲು ಜಿಲ್ಲಾ ಅನುಷ್ಠಾನ ಹಾಗೂ ನಿಗಾವಣೆ ಸಮಿತಿಯು ಇರುತ್ತದೆ.
- ❖ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗಾಗಿ ರಾಜ್ಯ ಮಟ್ಟದಲ್ಲಿ ಚಾಲನಾ (ಸ್ಟಿಯರಿಂಗ್) ಸಮಿತಿ ಇರುತ್ತದೆ.
- ❖ ಮಾಸ್ಟರ್ ತರಭೇತುದಾರರಿಗೆ ತರಭೇತಿ ಹಾಗೂ ಸಂಬಂಧಿಸಿದ ವಿಷಯಗಳ ಬಗ್ಗೆ ಕಾರ್ಯ ಚಟುವಟಿಕೆಗಳ ಆಯೋಜನೆ ಹಾಗೂ ಈ ಯೋಜನೆಯನ್ನು ಸಂಯೋಜಿಸಲು ರಾಜ್ಯ ನೋಡಲ್ ಏಜನ್ಸಿ ಇರುತ್ತದೆ.
- ❖ ಯೋಜನೆಗೆ ಸಮಗ್ರವಾಗಿ ಮಾರ್ಗದರ್ಶನ ನೀಡಲು ಹಾಗೂ ಎಲ್ಲ ಹಂತಗಳಲ್ಲಿ ಸಂಪರ್ಕ ಕಲ್ಪಿಸುವ ದಿಸೆಯಲ್ಲಿ ರಾಷ್ಟ್ರೀಯ ಚಾಲನಾ (ಸ್ಟಿಯರಿಂಗ್) ಸಮಿತಿ ಇರುತ್ತದೆ.

**ಉ**) ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಅನುಷ್ಠಾನ ಹಾಗೂ ನಿಗಾವಣೆ ಸಮಿತಿಯನ್ನು ಈ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ರಚಿಸಲಾಗಿದೆ. ರಾಜ್ಯ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರು ಅಧ್ಯಕ್ಷರಾಗಿರುವ ಚಾಲನಾ (ಸ್ಟಿಯರಿಂಗ್) ಸಮಿತಿಯನ್ನು ಯೋಜನೆಯ ಪರಿಣಾಮಕಾರಿ ಹಾಗೂ ಸಮರ್ಪಕ ಅನುಷ್ಠಾನಕ್ಕಾಗಿ ರಚಿಸಲಾಗಿದೆ.

***ಊ) ಜಿಲ್ಲಾ ಪರಿಸರ ಸಂರಕ್ಷಣೆ ಪ್ರಾಧಿಕಾರ:***

ಪರಿಸರ ಸಂರಕ್ಷಣೆ ಹಾಗೂ ಮಾಲಿನ್ಯ ನಿಯಂತ್ರಣ ವಿಷಯಗಳಲ್ಲಿ ಜಿಲ್ಲಾಮಟ್ಟದಲ್ಲಿ ತಲೆದೋರುವ ಸಮಸ್ಯೆಗಳು ಹಾಗೂ ಕುಂದುಕೊರತೆಗಳನ್ನು ಪರಿಹರಿಸುವ ದಿಸೆಯಲ್ಲಿ ಜಿಲ್ಲಾ ಪರಿಸರ ಸಂರಕ್ಷಣೆ ಪ್ರಾಧಿಕಾರವನ್ನು ಪ್ರತಿ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುತ್ತದೆ. ಪ್ರಾಧಿಕಾರದ ರಚನೆ ಈ ರೀತಿ ಇರುತ್ತದೆ:

| | | |
|---|---|---|
| 1. | ಜಿಲ್ಲೆಯ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2. | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ | ಸಹ ಅಧ್ಯಕ್ಷರು |
| 3. | ಜಿಲ್ಲಾ ಪೋಲೀಸ್ ವರಿಷ್ಟಾಧಿಕಾರಿ | ಸದಸ್ಯರು |
| 4. | ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ (ಟೆರಿಟೋರಿಯಲ್) ಹೆಡ್ ಕ್ವಾಟರ್ಸ್) | ಸದಸ್ಯರು |
| 5. | ಜಿಲ್ಲಾ ಆರೋಗ್ಯಾಧಿಕಾರಿ | ಸದಸ್ಯರು |
| 6. | ಪ್ರಾದೇಶಿಕ ಸಾರಿಗೆ ಅಧಿಕಾರಿ | ಸದಸ್ಯರು |

| | | |
|---|---|---|
| 7. | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ | ಸದಸ್ಯರು |
| 8. | ಫ್ಯಾಕ್ಟರೀಸ್ ಅಂಡ್ ಬಾಯ್‌ಲರ್ಸ್ ಮುಖ್ಯ ಪರಿವೀಕ್ಷಕರು | ಸದಸ್ಯರು |
| 9. | ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು ಕೃಷಿ ಇಲಾಖೆ | ಸದಸ್ಯರು |
| 10. | ಆಯುಕ್ತರು/ಮುಖ್ಯ ಅಧಿಕಾರಿ, ನಗರ ಪಾಲಿಕೆ/ಪುರಸಭೆ | ಸದಸ್ಯರು |
| 11. | ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ | ಸದಸ್ಯರು |
| 12. | ಒಬ್ಬರು ಸರ್ಕಾರೇತರ ಸದಸ್ಯರು | ಸದಸ್ಯರು |
| 13. | ಒಬ್ಬರು ಅಧಿಕಾರೇತರ ಸದಸ್ಯರು | ಸದಸ್ಯರು |
| 14. | ಜಿಲ್ಲಾ ಪ್ರಾದೇಶಿಕ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | ಸದಸ್ಯ ಕಾರ್ಯದರ್ಶಿ |

ಈ ಜಿಲ್ಲಾ ಪರಿಸರ ಸಂರಕ್ಷಣೆ ಪ್ರಾಧಿಕಾರವು ರಾಜ್ಯ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಭಿಪ್ರಾಯ ಸೂಚಿಸುವ ಹಾಗೂ ಶಿಫಾರಸ್ಸು ಮಾಡುವ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸುತ್ತದೆ.

***ಖ) ಪರಿಸರ ಸಾರ್ವಜನಿಕ ವಿಚಾರಣೆ ಸಮಿತಿ (Environmental Public Hearing Committee):***

ಪರಿಸರ ಆಘಾತ ಅಂದಾಜು ಅಧಿಸೂಚನೆ, 1994 ರ ಅಧಿಸೂಚನೆಯಲ್ಲಿ ನಮೂದಿತವಾಗಿರುವ ಕೆಲವು ಯೋಜನೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ವಿಚಾರಣೆ ನಡೆಸಲು ನಿಗದಿಪಡಿಸಿರುತ್ತದೆ. ಸಾರ್ವಜನಿಕ ವಿಚಾರಣೆಯ ಮುಖ್ಯ ಉದ್ದೇಶವೆಂದರೆ ಸಾರ್ವಜನಿಕರಿಂದ ಸಲಹೆಗಳು, ಅಭಿಪ್ರಾಯ, ಹೇಳಿಕೆ ಹಾಗೂ ಪ್ರತಿರೋದ ಸ್ವೀಕರಿಸುವುದಾಗಿರುತ್ತದೆ. ಸ್ಥಳೀಯ ನಾಗರೀಕರು, ಪರಿಸರ ಹಿತಾಸಕ್ತಿ ಗುಂಪುಗಳು ಹಾಗೂ ಯೋಜನೆಯ ಸ್ಥಳದಲ್ಲಿನ ನಿವಾಸಿಗಳು ಹಾಗೂ ಯೋಜನೆಯಿಂದ ನಿರ್ವಹಿತರಾಗುವ ಇಲ್ಲವೆ ಬಾಧೆಗೊಳಗಾಗುವ ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸಬಹುದಾಗಿರುತ್ತದೆ.

ಸಾರ್ವಜನಿಕ ವಿಚಾರಣೆ ಸಭೆ ಏರ್ಪಡಿಸಲು ಜಿಲ್ಲಾ ಮಟ್ಟದಲ್ಲಿ ಪರಿಸರ ಸಾರ್ವಜನಿಕ ವಿಚಾರಣೆ ಸಮಿತಿಯನ್ನು (Environmental Public Hearing Committee) ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸ್ಥಾಪಿಸಿರುತ್ತದೆ. ಸಮಿತಿಯ ರಚನೆ ಈ ರೀತಿ ಇರುತ್ತದೆ:

| | | |
|---|---|---|
| 1. | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2. | ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | ಸದಸ್ಯ ಸಂಚಾಲಕರು |
| 3. | ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಪ್ರತಿನಿಧಿ | ಸದಸ್ಯರು |

| | | |
|---|---|---|
| 4. | ಸಂಬಂಧಿತ ಜಿಲ್ಲಾ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು | ಸದಸ್ಯರು |
| 5. | ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪ್ರತಿನಿಧಿ | ಸದಸ್ಯರು |
| 6. | ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿ | ಸದಸ್ಯರು |
| 7. | ಸಂಬಂಧಿತ ಜಿಲ್ಲಾ ಸೂಪರಿಂಟೆಂಡಿಂಗ್ ಇಂಜಿನಿಯರ್/ಕಾರ್ಯಪಾಲಕ ಇಂಜಿನಿಯರ್, ಭಾರೀ/ಸಣ್ಣ ನೀರಾವರಿ ಇಲಾಖೆ | ಸದಸ್ಯರು |
| 8. | ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ಮೂವರು ಪ್ರತಿನಿಧಿಗಳು (ಪುರಸಭೆ/ಪಂಚಾಯತ್) | ಸದಸ್ಯರು |
| 9. | ಜಿಲ್ಲಾಧಿಕಾರಿಗಳಿಂದ ನಾಮ ನಿರ್ದೇಶನಗೊಂಡ ಮೂವರು ಹಿರಿಯ ನಾಗರೀಕರು | ಸದಸ್ಯರು |

ಋ) ***ಇಂಡೋ ನಾರ್ವೇಜಿಯನ್ ಎನ್‌ವಿರಾನ್‌ಮೆಂಟ್ ಪ್ರೋಗ್ರಾಂ* (INEP) :**

ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ನೋಡಲ್ ಇಲಾಖೆಯಾಗಿರುತ್ತದೆ. ಯೋಜನೆಯ ಮೇಲೆ ನಿಗಾವಹಿಸಲು, ಹಣಕಾಸಿನ ನಿರ್ವಹಣೆ ಹಾಗೂ ಪ್ರಗತಿಯನ್ನು ಯೋಜನಾ ಬದ್ಧವಾಗಿ ನಿರ್ವಹಿಸಲು ಒಂದು ಸಚಿವಾಲಯವನ್ನು ತೆರೆಯಲಾಗಿದೆ.

ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿನ ಅಧಿಕಾರಯುತ ಸಮಿತಿಯು ಈ ಯೋಜನೆಯಡಿಯಲ್ಲಿನ ಕಾರ್ಯಕ್ರಮಗಳಿಗೆ ಆಡಳಿತಾತ್ಮಕ ಹಾಗೂ ಆರ್ಥಿಕ ಸಹಮತಿಯನ್ನು ನಾರ್ವೆ ಸರ್ಕಾರ ಹಾಗೂ ಭಾರತ ಸರ್ಕಾರಗಳು ನವೆಂಬರ್ 1997 ರಲ್ಲಿ ಮಾಡಿಕೊಂಡ ಒಡಂಬಡಿಕೆ ಅನುಸಾರ ನೀಡುತ್ತದೆ.

ಇಂಡೋ ನಾರ್ವೇಜಿಯನ್ ಎನ್‌ವಿರಾನ್‌ಮೆಂಟ್ ಪ್ರೋಗ್ರಾಂ ಅಡಿ ಆಯ್ಕೆ ಮಾಡಲಾಗಿರುವ 12 ಯೋಜನೆಗಳು ಪರಿಸರ ಸಂಬಂದಿ ವಿಶಿಷ್ಠ ಸಮಸ್ಯೆಗಳು ಅಂದರೆ ಗಾಳಿ, ನೀರು, ಮಾಲಿನ್ಯ, ತ್ಯಾಜ್ಯ ವಸ್ತು ನಿರ್ವಹಣೆ, ತೆರೆದ ಜಾಗಗಳ ವ್ಯವಸ್ಥಾಪನೆ, ಮಣ್ಣು ಹಾಗೂ ನೀರು ಸಂರಕ್ಷಣೆ, ಮಳೆ ನೀರು ಸಂಗ್ರಹಣೆ ಮುಂತಾದ ಸಮಸ್ಯೆಗಳತ್ತ ಗಮನ ಹರಿಸುತ್ತವೆ.

1. ಮಡಿವಾಳ ಹಾಗೂ ಹೆಬ್ಬಾಳ ಕೆರೆಗಳ ಸಂಯೋಜಿತ ಅಭಿವೃದ್ಧಿ ಹಾಗೂ ದೊಡ್ಡಬೊಮ್ಮಸಂದ್ರ ಕೆರೆಯ ಪುನರುಜ್ಜೀವನ
2. ಹಾರು ಬೂದಿ (ಫ್ಲೈ ಆಷ್) ಬಳಕೆ ಯೋಜನೆ
3. ಪಿಕೋ ಜಲ ವಿದ್ಯುತ್ ಯೋಜನೆ
4. ಮೈಸೂರು ನಗರ ಪ್ರದೇಶದ ಸಂಯೋಜಿತ ಜೀವಿ ಪರಿಸ್ಥಿತಿ ಪರಿಸರ ಯೋಜನೆ– ಚಾಮುಂಡಿ ಬೆಟ್ಟ ಪ್ರದೇಶದಲ್ಲಿ

5. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸ್ಥಾನಿಕ ಗಿಡಗಂಟೆಗಳ ಸಂರಕ್ಷಣೆ ಹಾಗೂ ಪ್ರದೇಶಕ್ಕೆ ಸೀಮಿತವಾಗಿರುವ ಹಾಗೂ ಅಪಾಯದಂಚಿನಲ್ಲಿರುವ ಗಿಡಗಂಟೆಗಳನ್ನು ಅರ್‌ಬೊರೆಟಮ್‌ದಲ್ಲಿ ಸಂರಕ್ಷಿಸುವುದು.
6. ಗಣಿ ಚಟುವಟಿಕೆಗಳಲ್ಲಿ ಉಳಿಯುವ ಕಬ್ಬಿಣ ಅದಿರು ತ್ಯಾಜ್ಯವನ್ನು ಕಟ್ಟಡ ಸಾಮಗ್ರಿಯಾಗಿ ಪರಿವರ್ತಿಸುವ ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಪ್ರಾತ್ಯಕ್ಷಿಕೆ ಘಟಕದ ಸ್ಥಾಪನೆ.
7. ಬಯೋ ರಿಯಾಕ್ಟರ್ಸ್ ಬಳಸಿ ಕಾಫಿ ದ್ರವ್ಯತ್ಯಾಜ್ಯವನ್ನು ಪರಿಶುದ್ಧಗೊಳಿಸುವುದು..
8. ಸಂಯೋಜಿತ ನಗರ ಪರಿಸರ ಅಭಿವೃದ್ಧಿ ಯೋಜನೆ.
9. ಪೌರ ಕಾರ್ಮಿಕರನ್ನು ಸಬಲಗೊಳಿಸುವ ಕಾರ್ಯಕ್ರಮ.
10. ಗುಲ್ಬರ್ಗಾದಲ್ಲಿ ಹೆಲ್ತ್ ಕೇರ್ ಎಸ್ಟಾಬ್ಲಿಷ್‌ಮೆಂಟ್‌ಗಳಿಂದ ಹೊರಬರುವ ತ್ಯಾಜ್ಯದ ನಿರ್ವಹಣೆ ಹಾಗೂ ಶಿಕ್ಷಣ ಕಾರ್ಯಕ್ರಮ .
11. ಆಗ್ನೇಯ ಒಣವಲಯದಲ್ಲಿ ಬರುವ ತುಮಕೂರು, ಕೋಲಾರ ಹಾಗೂ ಬೆಂಗಳೂರು ಪ್ರದೇಶಗಳಲ್ಲಿ ವೈವಿಧ್ಯವಾದ ಮರಗಳ ಸಂತತಿ ಸಂರಕ್ಷಣೆಗೆ ಜರ್ಮ್ ಪ್ಲಾಸಂ ಸ್ಥಾಪನೆ.
12. ಪರಿಶುದ್ಧ ಉತ್ಪಾದನೆ ಅಳವಡಿಕೆ ಮೂಲಕ ಪರಿಶುದ್ಧ ಹಾಗೂ ದೀರ್ಘಕಾಲಿಕ ಕೈಗಾರಿಕಾ ಅಭಿವೃದ್ಧಿಯ ಸಾಧನೆ.

ಈ ಪರಿಕಲ್ಪಿತ ಯೋಜನೆಗಳ ಫಲವಾಗಿ ನಿರ್ಧಿಷ್ಠ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಯೋಜನೆಗಳನ್ನು ಸಧೃಡಗೊಳಿಸಿ ಕೆಳಕಂಡ ಉಪ ಯೋಜನೆಗಳನ್ನು ಪ್ರತ್ಯೇಕವಾಗಿ ಕೈಗೊಳ್ಳಲಾಗಿದೆ:

1. ಬೆಂಗಳೂರಿನಲ್ಲಿ ಮಳೆ ನೀರು ಸಂಗ್ರಹಣೆ ಯೋಜನೆ
2. ಗಣಿ ಚಟುವಟಿಕೆಗಳಲ್ಲಿ ಉಳಿಯುವ ಕಬ್ಬಿಣ ಅದಿರಿನ ತ್ಯಾಜ್ಯವನ್ನು ಕಟ್ಟಡ ಸಾಮಗ್ರಿಯಾಗಿ ಪರಿವರ್ತಿಸುವ ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಪ್ರಾತ್ಯಕ್ಷಿಕೆ ಘಟಕದ ಸ್ಥಾಪನೆ – ಕಬ್ಬಿಣ ಅದಿರು ತ್ಯಾಜ್ಯ ಬಳಕೆ ಛಾಪು (ಬ್ರಾಂಡ್) ಸ್ಥಾಪನೆ.
3. ಹಾರು ಬೂದಿ ಯೋಜನೆ – ಛಾಪು (ಬ್ರಾಂಡ್) ಸ್ಥಾಪನೆ.
4. ರಾಯಚೂರು ಮತ್ತು ಚಿಕ್ಕಮಗಳೂರಿನಲ್ಲಿ ಸಂಯೋಜಿತ ಘನ ತ್ಯಾಜ್ಯ ವಸ್ತು ನಿರ್ವಹಣೆ ಯೋಜನೆ.
5. ಗಿಡಗಂಟೆಗಳ ವೈವಿಧ್ಯಮಯತೆ ಅಧ್ಯಯನ, ಪರಿವರ್ತನೆ, ಜೀವಿ ಪರಿಸ್ಥಿತಿ, ಯುವಕರು ಹಾಗೂ ರೈತರಿಗೆ ಪರಿಸರ ಶಿಕ್ಷಣ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮ

***<u>ಮೇಲ್ವಿಚಾರಣೆ ಹಾಗು ಹೊಣೆಗಾರಿಕೆಯ ಮಾರ್ಗಗಳು:</u>***

ಅನುಷ್ಠಾನಗೊಳಿಸುವ ಏಜನ್ಸಿಗಳು ಯೋಜನಾ ವ್ಯವಸ್ಥಾಪನೆ ಪದ್ಧತಿಯನ್ನು ಪಾಲಿಸುವುದಲ್ಲದೆ ಐಎನ್‌ಇಪಿ ಸಚಿವಾಲಯವು ಸತತವಾಗಿ ಹಾಗೂ ನಿಯತವಾಗಿ ನಡೆಯುವ ಪರಿವೀಕ್ಷಣೆ ಕಾರ್ಯ ಕೈಗೊಂಡು ಆಯಾ ಯೋಜನೆಗಳ ಅನುಷ್ಠಾನದ ಪ್ರಗತಿಗೆ ಒತ್ತು ನೀಡುತ್ತದೆ. ಮುಂಚಿತವಾಗಿ ರೂಪಿಸಲ್ಪಟ್ಟ ವಿಧಾನಗಳು (pre-designed formats) ಕಾಲಕಾಲಕ್ಕೆ ಯೋಜನೆಗಳ ಆರ್ಥಿಕ/ ಭೌತಿಕ ಪ್ರಗತಿಯ ವರದಿಗಳನ್ನು ಪಡೆಯುವುದರ ಮೂಲಕ ಐಎನ್‌ಇಪಿ ಸಚಿವಾಲಯದ ಪರಾಮರ್ಶೆ ಕಾರ್ಯವನ್ನು ಬಲಗೊಳಿಸುತ್ತದೆ. ಗುಲ್ಬರ್ಗಾ, ರಾಯಚೂರು, ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ

ರಚಿಸಲಾಗಿರುವ ಉಪ ಸಮಿತಿಯು ಯೋಜನೆಗಳ ಪರಾಮರ್ಶೆ ಹಾಗೂ ನಿಗಾವಣೆ ಕಾರ್ಯವನ್ನು ಸುಗಮಗೊಳಿಸುತ್ತದೆ. ಕರ್ನಾಟಕ ಸರ್ಕಾರದ ಯೋಜನೆ ನಿಗಾವಣೆ ಘಟಕವು (ಆರ್ಥಿಕ ಇಲಾಖೆ) ಬಾಹ್ಯ ಅನುದಾನಿತ ಯೋಜನೆಗಳ ಬಗ್ಗೆ ಮಾಸಿಕ ಪ್ರಗತಿಯ ಪರಾಮರ್ಶೆ ನಡೆಸುತ್ತದೆ.

ಐಎನ್‌ಇಪಿ ಅನುಸರಿಸುವ ಸ್ಥಾಪಿತ ಹಣ ಬಿಡುಗಡೆ ಕಾರ್ಯವಿಧಾನವು ಪ್ರತಿ ಯೋಜನೆಯ ಮುಂಚೆಯೇ ಒಪ್ಪಂದಗೊಂಡ ಕಾರ್ಯಾಧಾರಿತವಾಗಿದ್ದು ಈ ಪದ್ಧತಿ ಗುರಿಗೆ ಎದುರಾಗಿ ಪೂರ್ಣಗೊಂಡ ಕಾರ್ಯಚಟುವಟಿಕೆಗಳ ತಾಳೆ ನೋಡಿ ಆಯಾ ಯೋಜನೆಗಳ ಅನುಷ್ಠಾನದ ಮೇಲೆ ನಿಗಾ ಇಟ್ಟು ನಿಗದಿತ ಗುರಿಗಳನ್ನು ಸಾಧಿಸಲಾಗುತ್ತದೆ. ಈ ಯೋಜನೆ ನಿಮಿತ್ತ ನೇಮಿಸಲಾಗುವ ಶಾಸನಬದ್ಧ ಲೆಕ್ಕ ಪರಿಶೋಧಕರು ಪೂರ್ವ ಲೆಕ್ಕ ಪರಿಶೋಧನೆ, ಸಮಕಾಲೀನ ಲೆಕ್ಕ ಪರಿಶೋಧನೆ ಹಾಗೂ ವಾರ್ಷಿಕ ಲೆಕ್ಕ ಪರಿಶೋಧನೆಗಳನ್ನು ಕೈಗೊಂಡು ಎಲ್ಲ ಯೋಜನೆಗಳನ್ನು ಕುರಿತಂತೆ ಅಪೇಕ್ಷಿಸಲಾದ ಮಧ್ಯಂತರ ಪರಾಮರ್ಶೆ/ಸರಿಪಡಿಸುವಿಕೆಗೆ ನೆರವಾಗುತ್ತದೆ. ಈ ಪ್ರೋಗ್ರಾಂ ಮಹಾಲೇಖಪಾಲಕರ ಲೆಕ್ಕ ಪರಿಶೋಧನೆಗೆ ಸಹ ಒಳಪಡುತ್ತದೆ. ಎಲ್ಲ ಯೋಜನೆಗಳು ಆಯಾ ಕ್ಷೇತ್ರಗಳ ತಜ್ಞರುಗಳ ವಿಶ್ಲೇಷಣೆಗೆ ಸಹ ಒಳಪಡುತ್ತವೆ.

ಎಲ್ಲ ಯೋಜನೆಗಳ ಬಗ್ಗೆ ಐಎನ್‌ಇಪಿ ಸಚಿವಾಲಯವು ಸಂಸ್ಕರಣ (ಪ್ರೋಸಸ್) ದಾಖಲಾತಿ ಮೂಲಕ ಸಮಸ್ಯೆಗಳನ್ನು ದಾಖಲಿಸಲು, ಪರಿಹಾರವನ್ನು ವ್ಯಾಖ್ಯಾನಿಸಲು, ಅನುಷ್ಠಾನದಲ್ಲಿ ಕಲಿತ ಪಾಠಗಳು, ತಂತ್ರಜ್ಞಾನ ಅಳವಡಿಕೆಯ ಸಾಧನೆಯನ್ನು ದಾಖಲಿಸುತ್ತದೆ.

***ಎನ್‌ವಿಸ್ ನೋಡ್/ಸೆಂಟರ್ (Envis Node/Centre):***

ಎನ್‌ವಿಸ್ ನೋಡ್ ಅನ್ನು 2002 ನೇ ಸಾಲಿನಲ್ಲಿ ಭಾರತ ಸರ್ಕಾರದ ಆರ್ಥಿಕ ನೆರವಿನೊಂದಿಗೆ ಸ್ಥಾಪಿಸಲಾಗಿದೆ. ಪ್ರಾರಂಭದಿಂದ ರೂ.6,81,261/- ಅನುದಾನದ ನೆರವಿನಿಂದ ಕೆಳಕಂಡ ಕಾರ್ಯ ಚಟುವಟಿಕೆಯಗಳನ್ನು ಕೈಗೊಳ್ಳಲಾಗಿದೆ:

- ‘ಕೆರೆಗಳು’, ‘ನೀರು’ ವಿಷಯಗಳ ಬಗ್ಗೆ ನೋಡ್ ಎರಡು ವಾರ್ತಾ ಪತ್ರಿಕೆಗಳನ್ನು ಪ್ರಕಟಿಸಿದೆ ಹಾಗೂ ‘ಜೈವಿಕ ಇಂಧನ’ ಹಾಗೂ ‘ಮರಳುಗಾಡಾಗುವುದನ್ನು ತಡೆಯುವ ತಂತ್ರಜ್ಞಾನ’ ವಿಷಯಗಳ ಬಗ್ಗೆ ವಾರ್ತಾ ಪತ್ರಿಕೆಗಳನ್ನು ತಯಾರಿಸಿದ್ದು, ಅಂತಿಮ ಸಹಮತಿಯ ಹಂತದಲ್ಲಿದೆ. ‘ಇಂಧನ ತಂತ್ರಜ್ಞಾನಗಳು’ ಹಾಗೂ ‘ವೈದ್ಯಕೀಯ ಸಸ್ಯಗಳು’ ಈ ವಿಷಯಗಳ ಬಗ್ಗೆ ಎನ್‌ವಿಸ್ ನೋಡ್ ಹಾಲಿ ಕಾರ್ಯತತ್ಪರವಾಗಿದೆ.
- ರಾಜ್ಯ ಪರಿಸರ ವರದಿ ಹಾಗೂ ಕಾರ್ಯ ಯೋಜನೆ 2003 ವರದಿಗಳ ವಿನ್ಯಾಸ, ಲೇಔಟ್ ಹಾಗೂ ವಿಷಯ ಪರಿಶೀಲನೆ ಕಾರ್ಯಗಳಲ್ಲಿ ರಾಜ್ಯ ಪರಿಸರ ವರದಿ ಘಟಕಕ್ಕೆ ನೋಡ್ ನೆರವಾಗಿದೆ.
- http:// parisaramahiti. kar.nic.in ಹೊಂದಿದ ವೆಬ್ ಸೈಟ್‌ನ್ನು ನೋಡ್ ವ್ಯವಸ್ಥೆಗೊಳಿಸಿ ಅನಾವರಣಗೊಳಿಸಿದೆ. ಕರ್ನಾಟಕದ ಸಿಹಿ ನೀರು ಹಾಗೂ ಸಾಗರ ಮೀನುಗಳ ಬಗ್ಗೆ ಗಣಕೀಕೃತ ಡಾಟಾಬೇಸ್‌ನ್ನು ತಯಾರಿಸಿದೆ.

ಎನ್‌ವಿಸ್‌ನೋಡನ್ನು 5 ವರ್ಷಗಳ ಹೆಚ್ಚಿನ ಅವಧಿಗೆ ವಿಸ್ತರಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ. ಭಾರತ ಸರ್ಕಾರದ ನಿರ್ದೇಶಾನುಸಾರ ಎನ್‌ವಿಸ್‌ನೋಡನ್ನು ಎನ್‌ವಿಸ್ ಕೇಂದ್ರ ಎಂದು

ಪರಿವರ್ತಿಸಲಾಗಿದೆ. ಮೂರು ವರ್ಷಗಳ ಅವಧಿಗೆ ರೂ.10.50 ಲಕ್ಷಗಳ ವಾರ್ಷಿಕ ಅನುದಾನ ನೀಡಲು ಭಾರತ ಸರ್ಕಾರ ಒಪ್ಪಿದ್ದು ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಎನ್‌ವಿಎಸ್ ಸೆಂಟರ್ ಹಮ್ಮಿಕೊಂಡಿರುತ್ತದೆ:

1. ಪರಿಸರ ಮತ್ತು ಎನ್‌ವಿರಾನ್‌ಮೆಂಟ್ ಇಂಜಿನಿಯರಿಂಗ್‌ದ ವಿವಿಧ ವಿಷಯಗಳಲ್ಲಿ ಸಂಗ್ರಹ ಹಾಗೂ ಪ್ರಸಾರ ಕೇಂದ್ರಗಳನ್ನು ಕಟ್ಟುವುದು.
2. ಮಾಹಿತಿ ಪಡೆಯುವಿಕೆ, ಸಂಸ್ಕರಣ, ಸಂಗ್ರಹ (ಸ್ಟೋರೇಜ್) ಮಾಹಿತಿ ಹಿಂಪಡೆಯುವಿಕೆ (ರಿಟ್ರಿವಲ್) ಹಾಗೂ ಪ್ರಸಾರ ಕುರಿತಂತೆ ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು.
3. ಪರಿಸರ ಮಾಹಿತಿ ತಂತ್ರಜ್ಞಾನದಲ್ಲಿ ಸಂಶೋಧನೆ, ಅಭಿವೃದ್ಧಿ ಹಾಗೂ ನವೀನತೆಯನ್ನು ಬೆಂಬಲಿಸುವುದು ಹಾಗೂ ಉತ್ತೇಜಿಸುವುದು.
4. ಸದ್ಯದ ಬೇಡಿಕೆಗಳನ್ನು ಪೂರೈಸುವ ಹಾಗೂ ಮುಂದಿನ ಬಳಕೆದಾರರ ಅಗತ್ಯತೆಗಳನ್ನು ಪೂರೈಸಲು ಅಭಿವೃದ್ಧಿ ಪಡಿಸಬಹುದಾದ ರಾಷ್ಟ್ರೀಯ ಪರಿಸರ ಮಾಹಿತಿ ಸೇವೆಯನ್ನು ನೀಡುವುದು.
5. ಬಳಕೆದಾರರಿಗೆ ತ್ವರಿತವಾಗಿ ಮಾಹಿತಿಯನ್ನು ಪ್ರಸಾರ ಮಾಡುವ ದಿಸೆಯಲ್ಲಿ ಪ್ರಚಾರ, ಮಾಹಿತಿ ಹಿಂಪಡೆಯುವಿಕೆ (ರಿಟ್ರಿವಲ್) ಹಾಗೂ ಸಂಗ್ರಹ ಸಾಮರ್ಥ್ಯವನ್ನು ಒದಗಿಸುವುದು.
6. ಪರಿಸರಕ್ಕೆ ಸಂಬಂಧಿಸಿದ ಮಾಹಿತಿಯ ಪರಸ್ಪರ ವಿನಿಮಯಕ್ಕಾಗಿ ರಾಷ್ಟ್ರೀಯ ಸಹಯೋಗ ಹಾಗೂ ಸಂಪರ್ಕ ಸಾಧನೆಯನ್ನು ಉತ್ತೇಜಿಸುವುದು.

## I11) *ಪಾಲಿಸಲಾಗುವ ಕಟ್ಟಳೆಗಳು ಹಾಗು ಕಾರ್ಯ ವಿಧಾನ:*

ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ನಿರ್ದೇಶನಗಳು ಹಾಗೂ ಮಾರ್ಗಸೂಚಿಯನ್ನು ಸ್ಥೂಲವಾಗಿ ಪಾಲಿಸುವುದಲ್ಲದೆ, ಕೆಳಕಂಡ ಸದಸ್ಯರನ್ನೊಳಗೊಂಡ ಒಂದು ಚಾಲನಾ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಅನುಷ್ಠಾನಕ್ಕಾಗಿ ಮಾರ್ಗದರ್ಶಕಗಳನ್ನು ವ್ಯಾಖ್ಯಾನಿಸುತ್ತದೆ.

1. ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ – ಅಧ್ಯಕ್ಷರು
2. ಕಾರ್ಯದರ್ಶಿ (ಪರಿಸರ) ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ – ಸದಸ್ಯರು
3. ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ – ಸದಸ್ಯರು
4. ಡಾ: ಬಾಂದೋಪಾಧ್ಯಾಯ್ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ – ಸದಸ್ಯರು
5. ಯೋಜನಾ ಸಮನ್ವಯಾಧಿಕಾರಿ, ಐಎನ್‌ಇಪಿ – ಸದಸ್ಯರು

*ಮೇಲ್ವಿಚಾರಣೆ ಹಾಗು ಹೊಣೆಗಾರಿಕೆಯ ಮಾರ್ಗಗಳು:*

ಅನುಷ್ಠಾನಗೊಳಿಸುವ ಏಜನ್ಸಿಯು ಮಾರ್ಗದರ್ಶಕ ಅಂಶಗಳನ್ನು ಪಾಲಿಸುವುದಲ್ಲದೆ, ಭಾರತ ಸರ್ಕಾರದಿಂದ ಪಡೆದ ಅನುದಾನಕ್ಕೆ ಹಣ ಉಪಯೋಗತಾ ಪತ್ರವನ್ನು ನೀಡುತ್ತದೆ. ಗುಣಾತ್ಮಕ ಅನುಷ್ಠಾನವನ್ನು ಮೇಲೆ ತಿಳಿಸಿದ ಚಾಲನಾ ಸಮಿತಿಯು ಪರಾಮರ್ಶೆ ನಡೆಸುತ್ತದೆ.

**iv)** *ಇಲಾಖೆಯ ಕಾರ್ಯಚಟುವಟಿಕೆಗಳ ಅನುಷ್ಠಾನದಲ್ಲಿ ಪಾಲಿಸಲಾಗುವ ಸೂತ್ರಗಳು (ನಾರ್ಮ್ಸ್):*

ಇಲಾಖೆ ಅನುಸರಿಸುವ ಸೂತ್ರಗಳ ಸ್ಥೂಲ ಚೌಕಟ್ಟು ಈ ರೀತಿ ಇರುತ್ತದೆ:

1. ಸಚಿವಾಲಯ ಕೈಪಿಡಿಯಲ್ಲಿ ವಿಷದಪಡಿಸಲಾಗಿರುವ ಕಾರ್ಯ ವಿಧಾನಗಳ, ಸರ್ಕಾರದ ವ್ಯವಹಾರ ನಿಯಮ ಹಾಗೂ ವ್ಯವಹಾರ ಹಂಚಿಕೆ ನಿಯಮ, ಅಗಿಂದಾಗ್ಗೆ ಹೊರಡಿಸಲಾಗುವ ಸ್ಥಾಯೀ ಆದೇಶಗಳು, ಸುತ್ತೋಲೆಗಳಲ್ಲಿನ ಮಾರ್ಗಸೂಚನೆಗಳು, ಅಧಿಕೃತ ಜ್ಞಾಪನ, ಆಡಳಿತ ಹಾಗೂ ಆರ್ಥಿಕ ಪ್ರತ್ಯಾಯೋಜನೆಯ ಆದೇಶಗಳು.

2. ಪರಿಸರ (ಸಂರಕ್ಷಣೆ) ಕಾಯ್ದೆಯಡಿಯಲ್ಲಿನ ಶಾಸನ ಬದ್ಧ ನಿಯಮಗಳು ಹಾಗೂ ಅದರಡಿ ಹೊರಡಿಸಲಾಗಿರುವ ವಿವಿಧ ನಿಯಮಾವಳಿಗಳು/ ಅಧಿಸೂಚನೆಗಳು, ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಹಾಗು ನಿಯಂತ್ರಣ) ಕಾಯ್ದೆ 1981.

3. ಪರಿಸರ ಆಘಾತ ಅಧಿಸೂಚನೆ, 1994 ರಲ್ಲಿನ ಮಾರ್ಗಸೂಚಿ, ಪರಿಸರ ಮತ್ತು ಅರಣ್ಯ ಮಂತ್ರಾಲಯವು ಆಗಿಂದಾಗ್ಗೆ ಹೊರಡಿಸುವ ತಿದ್ದುಪಡಿ ಒಳಗೊಂಡಂತೆ.

4. ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ಹೊರಡಿಸಿರುವ ಕರಾವಳಿ ವಲಯ ನಿಯಮಾವಳಿಯಲ್ಲಿ (CRZ) ನಮೂದಿತವಾಗಿರುವ ಮಾರ್ಗಸೂಚಿ.

5. ರಾಷ್ಟ್ರೀಯ ಕೆರೆ ಸಂರಕ್ಷಣೆ ಯೋಜನೆ ಹಾಗು ರಾಷ್ಟ್ರೀಯ ನದಿ ಸಂರಕ್ಷಣೆ ಯೋಜನೆಗಳನ್ನು ಕುರಿತಂತೆ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ನಿಗದಿಪಡಿಸಿರುವ ಮಾರ್ಗಸೂಚಿ.

6. ರಾಷ್ಟ್ರೀಯ ಹಸಿರು ಪಡೆ ಯೋಜನೆ ಕುರಿತಂತೆ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ನಿಗಧಿಪಡಿಸಿರುವ ಮಾರ್ಗಸೂಚಿ.

v) *ಇಲಾಖೆ ಅನುಷ್ಠಾನಗೊಳಿಸುವ ಕಾರ್ಯ ಚಟುವಟಿಕೆಗಳ ಸಂಬಂಧ ಇಲಾಖೆಯಲ್ಲಿರುವ ಯಾ ಅಧೀನತ್ವದಲ್ಲಿರುವ ಹಾಗು ಸಿಬ್ಬಂದಿಯು ಉಪಯೋಗಿಸುವ ದಾಖಲೆಗಳು, ಕೈಪಿಡಿಗಳು, ಸೂಚನೆಗಳು, ನಿಯಮಾವಳಿಗಳು:*

ಅಧೀನ ಕಛೇರಿಗಳ ಮೂಲಕ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಕೆಳಕಂಡ ಕಾಯ್ದೆಗಳು ಹಾಗು ನಿಯಮಾವಳಿಗಳನ್ನು ನಿರ್ವಹಿಸುತ್ತದೆ.

ಅ) ಜಲ (ಮಾಲಿನ್ಯ ನಿವಾರಣಾ ಹಾಗು ನಿಯಂತ್ರಣ) ಕಾಯ್ದೆ, 1974

ಆ) ವಾಯು (ಮಾಲಿನ್ಯ ನಿವಾರಣಾ ಹಾಗು ನಿಯಂತ್ರಣ) ಕಾಯ್ದೆ, 1981

ಇ) ಪರಿಸರ (ಸಂರಕ್ಷಣೆ) ಕಾಯ್ದೆ, 1986 ಹಾಗೂ

ಮೇಲ್ಕಂಡ ಕಾಯ್ದೆಗಳಡಿಯಲ್ಲಿ ಹೊರಡಿಸಲಾಗಿರುವ ನಿಯಮಾವಳಿಗಳು.

ಭಾರತ ಸರ್ಕಾರವು ಪರಿಸರ (ಸಂರಕ್ಷಣೆ) ಕಾಯ್ದೆ, 1986 ಅಡಿ ರಚಿಸಿರುವ 'ಕೆಳಕಂಡ ನಿಯಮಾವಳಿಗಳು ಸಹ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಬರುತ್ತವೆ:

1) ಅಪಾಯಕಾರಿ ತ್ಯಾಜ್ಯ ವಸ್ತುಗಳ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು, 1989 ಹಾಗೂ ತಿದ್ದುಪಡಿ ನಿಯಮ 2000 ಹಾಗು 2003.
2) ಅಪಾಯಕಾರಿ ರಾಸಾಯನಿಕ ವಸ್ತುಗಳ ತಯಾರಿಕೆ, ದಾಸ್ತಾನು ಮತ್ತು ಆಮದು ನಿಯಮಗಳು, 1989
3) ಅಪಾಯಕಾರಿ ಸೂಕ್ಷ್ಮ ಜೀವಾಣುಗಳ ಮತ್ತು ವಂಶದಾಯಿಕವಾಗಿ ಬರುವ ಜೀವಾಣುಗಳು ಅಥವಾ ಜೀವಕೋಶಗಳ ತಯಾರಿಕೆ, ಬಳಕೆ, ಆಮದು ರಫ್ತು ಮತ್ತು ದಾಸ್ತಾನು ನಿಯಮಗಳು, 1989.
4) ಪರಿಸರ ಪರಿಣಾಮ ನಿರ್ಧರಣಾ ಅಧಿಸೂಚನೆ, 1994, 1997 ಹಾಗೂ 2002.
5) ಜೈವಿಕ ವೈದ್ಯಕೀಯ ತ್ಯಾಜ್ಯ ವಸ್ತುಗಳ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು, 1998 ಹಾಗೂ ತಿದ್ದುಪಡಿ ನಿಯಮ 2000 ಹಾಗು 2003.
6) ಪುನರ್ ಬಳಕೆ ಫ್ಲಾಸ್ಟಿಕ್‌ಗಳ (ತಯಾರಿಕೆ ಮತ್ತು ಬಳಕೆ) ನಿಯಮಗಳು 1999 ಮತ್ತು ತಿದ್ದುಪಡಿ ನಿಯಮ 2003.
7) ಶಬ್ಧ ಮಾಲಿನ್ಯ (ನಿಭಂದನೆ ಮತ್ತು ನಿಯಂತ್ರಣ) ನಿಯಮಗಳು 2000 ಮತ್ತು ತಿದ್ದುಪಡಿ ನಿಯಮ 2002.
8) ಮುನಿಸಿಪಲ್ ಘನರೂಪದ ತ್ಯಾಜ್ಯವಸ್ತುಗಳ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು 2000
9) ಕರಾವಳಿ ಭಾಗಗಳನ್ನು ಕರಾವಳಿ ನಿಯಂತ್ರಣ ವಲಯ ಎಂದು ಘೋಷಿಸಲಾಗಿರುವ ಅಧಿಸೂಚನೆ ಹಾಗೂ ಕರಾವಳಿ ನಿಯಂತ್ರಣ ವಲಯದಲ್ಲಿನ ಚಟುವಟಿಕೆಗಳ ನಿಬಂಧನೆ.
10) ಬ್ಯಾಟರೀಸ್ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು 2001.
11) ರಾಸಾಯನಿಕ ಅಪಘಾತಗಳು (ತುರ್ತು ಯೋಜನೆ, ಸಿದ್ಧತೆ ಮತ್ತು ಪ್ರತಿ ಸ್ಪಂದಿಸುವ) ನಿಯಮಗಳು 1996.
12) ಜೈವಿಕ ವೈವಿಧ್ಯ ಅಧಿನಿಯಮ, 2002 ಮತ್ತು ಜೈವಿಕ ವೈವಿಧ್ಯ ನಿಯಮಗಳು 2004.

ಇಲಾಖೆಯ ಸಚಿವಾಲಯ ಮಟ್ಟದಲ್ಲಿ ಹೊಂದಿರುವ ದಾಖಲೆಗಳ ವಿವರಗಳನ್ನು ಕೆಳಗಿನ ಕಂಡಿಕೆ (vi) ರಲ್ಲಿ ವಿಷದಪಡಿಸಿದೆ.

**(vi) ಇಲಾಖೆಯು ಹೊಂದಿರುವ ಯಾ ಅಧೀನತ್ವದಲ್ಲಿರುವ ವಿವಿಧ ದಾಖಲೆಗಳ ವಿವರಗಳು:**

ಸರ್ಕಾರದ ವ್ಯವಹಾರ ಹಂಚಿಕೆ ನಿಯಮದಲ್ಲಿ ಪಟ್ಟಿಮಾಡಲಾಗಿರುವ ಕಡತಗಳು/ ದಾಖಲೆಗಳನ್ನು ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ ಹೊಂದಿರುತ್ತದೆ ಯಾ ನಿರ್ವಹಿಸುತ್ತದೆ.

ಕೆಳಕಂಡ ಅಧೀನ ಕಛೇರಿಗಳು/ಸಂಸ್ಥೆಗಳು ಸರ್ಕಾರಕ್ಕೆ ಕಳುಹಿಸುವ ಪ್ರಸ್ತಾವನೆಗಳಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದ ಕಡತಗಳು/ದಾಖಲೆಗಳನ್ನು ಸಹ ಇಲಾಖೆ ಹೊಂದಿರುತ್ತದೆ ಯಾ ನಿರ್ವಹಿಸುತ್ತದೆ:

ಅಧೀನ ಕಛೇರಿಗಳು/ಸಂಸ್ಥೆಗಳು ಅಂದರೆ ಗುಲ್ಬರ್ಗಾ, ಬಳ್ಳಾರಿ, ಬೆಳಗಾಂ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿರುವ ಅಧೀನ ಕಛೇರಿಗಳು ಹಾಗೂ ಕೆಳಕಂಡ ಸಂಸ್ಥೆಗಳು (1) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (2) ಕೆರೆ ಅಭಿವೃದ್ಧಿ ಪ್ರಾಧಿಕಾರ (3) ಪರಿಸರ ವ್ಯವಸ್ಥಾಪನೆ ಹಾಗು ನೀತಿ ಸಂಶೋಧನಾ ಸಂಸ್ಥೆ (4) ಪರಿಸರ ಮಾಹಿತಿ ವ್ಯವಸ್ಥೆ (ಎನ್‌ವಿಸ್ ನೋಡ್) ಕರ್ನಾಟಕ ರಾಜ್ಯ ಜೀವಿ ವೈವಿಧ್ಯತೆ ಮಂಡಳಿ (6) ಇಂಡೋ ನಾರ್ವೇಜಿಯನ್ ಎನ್‌ವಿರಾನ್‌ಮೆಂಟ್ ಪ್ರೋಗ್ರಾಂ.

ವಿವಿಧ ದಾಖಲೆಗಳು ವಿವರಗಳು ಕೆಳಕಂಡಂತಿವೆ:

1) ಇಲಾಖೆ ನೀಡುವ ಪರಿಸರ ವಿಮೋಚನೆ ವಿಷಯಕ್ಕೆ ಸಂಬಂಧಿಸಿದ ದಾಖಲೆಗಳು.
2) ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾದ ಕರಾವಳಿ ವಲಯ ನಿಯಂತ್ರಣ ವಿಷಯಕ್ಕೆ ಸಂಬಂಧಿಸಿದ ದಾಖಲೆಗಳು.
3) ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಕರಾವಳಿ ವಲಯ ನಿಯಂತ್ರಣ ವಿಷಯ ಕುರಿತಂತೆ ನೀಡಲಾದ ವಿಮೋಚನೆ ಅಥವಾ ವಿಮೋಚನೆ ನಿರಾಕರಣೆಗೆ ಸಂಬಂಧಿಸಿದ ದಾಖಲೆಗಳು.
4) ರಾಜ್ಯ ಪರಿಸರ ವರದಿ
5) ಇಂಡೋ ನಾರ್ವೇಜಿಯನ್ ಎನ್‌ವಿರಾನ್‌ಮೆಂಟ್ ಪ್ರೋಗ್ರಾಂಗೆ ಸಂಬಂಧಿಸಿದ ಕಾರ್ಯಯೋಜನೆಗಳು ಹಾಗೂ ಅವುಗಳಿಗೆ ಸಂಬಂಧಿಸಿದ ದಾಖಲೆಗಳು.
6) ರಾಷ್ಟ್ರೀಯ ಕೆರೆ ಸಂರಕ್ಷಣಾ ಯೋಜನೆ ಹಾಗು ರಾಷ್ಟ್ರೀಯ ನದಿ ಸಂರಕ್ಷಣೆ ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳು.
7) ರಾಷ್ಟ್ರೀಯ ಹಸಿರು ಪಡೆ ಯೋಜನೆಗೆ ಸಂಬಂಧಿಸಿದ ವಿವರಗಳು ಅಂದರೆ ಇಕೋ ಕ್ಲಬ್‌ಗಳ ಸ್ಥಾಪನೆ ಹಾಗೂ ಅವುಗಳ ಕಾರ್ಯ ಚಟುವಟಿಕೆಗಳು.
8) ಇಲಾಖೆಗೆ ಸಂಬಂಧಿಸಿದ ಆಯವ್ಯಯ ವಿವರಗಳು : ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿನ ಖರ್ಚಿನ ವಿವರಗಳು.

**(vii) <u>ಇಲಾಖೆಯ ಆಡಳಿತ ವಿಷಯದಲ್ಲಿ ಯಾ ನೀತಿ ನಿರೂಪಣೆಯಲ್ಲಿ ಸಾರ್ವಜನಿಕರ ಪ್ರಾತಿನಿಧ್ಯ ಅಥವಾ ಸಲಹೆ ಪಡೆಯುವ ಪದ್ಧತಿ ಇಲಾಖೆಯಲ್ಲಿದ್ದರೆ ಅದರ ವಿವರಗಳು:</u>**

ಅ) ವ್ಯಕ್ತಿಗಳು/ಸಂಸ್ಥೆಗಳಿಂದ ಅನುದಾನಕ್ಕಾಗಿ ಪ್ರಸ್ತಾವನೆ/ಕೋರಿಕೆಗಳ ಮೌಲ್ಯಮಾಪನಕ್ಕಾಗಿ ಒಂದು ವೈಜ್ಞಾನಿಕ ಸಮಿತಿಯನ್ನು ರಚಿಸಲಾಗಿದ್ದು ಇದರಲ್ಲಿ ವಿಜ್ಞಾನ ಹಾಗೂ ಪರಿಸರ ವಿಷಯದಲ್ಲಿ ಹಿನ್ನೆಲೆಯುಳ್ಳ ಪರಿಣಿತರಿರುತ್ತಾರೆ.

ಆ) ಪರಿಸರ ವಿಮೋಚನೆಗಾಗಿ ಸಲ್ಲಿಸಲ್ಪಡುವ ಪ್ರಸ್ತಾವನೆಗಳನ್ನು ತಾಂತ್ರಿಕ ದೃಷ್ಟಿಯಿಂದ ಪರಿಶೋಧಿಸಲು ಪರಿಸರ ವಿಮೋಚನಾ ಸಮಿತಿಯನ್ನು ರಚಿಸಲಾಗಿದೆ.

ಇ) ಕರಾವಳಿ ವಲಯ ನಿಯಂತ್ರಣ ನಿಯಮಾವಳಿಗಳಡಿಯಲ್ಲಿ ಬರುವ ಪ್ರಸ್ತಾವನೆಗಳ ಪರಿಶೋಧನೆಗಾಗಿ ಹಾಗೂ ಪರಿಸರ ವಿಮೋಚನೆ ನೀಡಲು ಯಾ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಶಿಫಾರಸ್ಸು ಮಾಡಲು ಕರ್ನಾಟಕ ರಾಜ್ಯ ಕರಾವಳಿ ವಲಯ ವ್ಯವಸ್ಥಾಪನಾ ಪ್ರಾಧಿಕಾರವನ್ನು ರಚಿಸಲಾಗಿದೆ.

ಈ) ಪರಿಸರ (ಸಂರಕ್ಷಣೆ) ಕಾಯ್ದೆ 1986ರ ಅಡಿ ಭಾರತ ಸರ್ಕಾರ ಹೊರಡಿಸಿರುವ ಪರಿಸರ ಅಘಾತ ಅಂದಾಜು ಅಧಿಸೂಚನೆಯಲ್ಲಿ ವಿರ್ಧಿಷ್ಠ ಕೈಗಾರಿಕೆಗಳನ್ನು ಕುರಿತಂತೆ ಸಾರ್ವಜನಿಕ ವಿಚಾರಣೆ ನಡೆಸುವುದು ಕಡ್ಡಾಯ ಕ್ರಮಬದ್ಧವಾಗಿರುತ್ತದೆ.

ಉ) ಅಪಾಯಕಾರಿ ತ್ಯಾಜ್ಯ ವಸ್ತು, ವೈದ್ಯಕೀಯ ತ್ಯಾಜ್ಯವಸ್ತುವಿನಂತಹ ವಿಶೇಷವಿಷಯ/ಪ್ರಕರಣಗಳನ್ನು ನಿರ್ವಹಿಸುವಲ್ಲಿ ವಿಜ್ಞಾನ ಹಾಗು ಇಂಜಿನಿಯರಿಂಗ್ ಹಿನ್ನೆಲೆಯುಳ್ಳ ಪರಿಣಿತರ ಸಲಹೆಯನ್ನು ಇಲಾಖೆ ಪಡೆಯುತ್ತದೆ.

ಊ) ಇಲಾಖೆಯು ಪರಿಸರ ಪ್ರಶಸ್ತಿ ಪ್ರಧಾನಕ್ಕಾಗಿ ಅರ್ಹರನ್ನು ಆಯ್ಕೆ ಮಾಡಲು (ವ್ಯಕ್ತಿ / ಸಂಸ್ಥೆಗಳು) ಪ್ರತಿವರ್ಷ ಆಯ್ಕೆ ಸಮಿತಿಯನ್ನು ರಚಿಸುತ್ತದೆ. ಈ ಆಯ್ಕೆ ಸಮಿತಿಯಲ್ಲಿ ಇಲಾಖೆಯ ಸದಸ್ಯರಲ್ಲದೆ ಇಲಾಖೆಯ ಹೊರಗಿನ ಸದಸ್ಯರೂ ಇರುತ್ತಾರೆ.

**(viii) <u>ಎರಡು ಅಥವಾ ಹೆಚ್ಚು ಸದಸ್ಯರಿರುವ ಬೋರ್ಡ್, ಮಂಡಳಿಗಳು, ಸಮಿತಿ ಹಾಗು ಇತರೆ ಕಾಯಗಳು ಇಲಾಖೆಯ ಭಾಗವಾಗಿ ಇಲ್ಲವೇ ಸಲಹೆಗಾಗಿ ರಚಿಸಲ್ಪಟ್ಟ ಹಾಗೂ ಸದರಿ ಬೋರ್ಡ್, ಮಂಡಳಿ, ಸಮಿತಿ ಹಾಗೂ ಇತರೆ ಕಾಯಗಳು ನಡೆಸುವ ಸಭೆಗಳು ಸಾರ್ವಜನಿಕರಿಗೆ ತೆರದಿರುವುದೇ ಯಾ ಸಭೆಯ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಾಗುವುದೇ</u>**

ಇಲಾಖೆ ಕೆಳಕಂಡ ಸಮಿತಿಗಳನ್ನು ರಚಿಸಿರುತ್ತದೆ:

1) ವ್ಯಕ್ತಿ/ಸಂಸ್ಥೆಗಳಿಂದ ಬರುವ ಅನುದಾನ ಕೋರಿಕೆಗಳನ್ನು ವೈಜ್ಞಾನಿಕ ಸಮಿತಿಯು ಮೌಲ್ಯಮಾಪನ ಮಾಡುತ್ತದೆ. ಸಂಬಂಧಿತ ಸಂಸ್ಥೆ/ಪ್ರಸ್ಥಾವಿಕರಿಗೆ ಸಮಿತಿಯ ಮುಂದೆ ವಿವರಗಳನ್ನು ಮಂಡಿಸಲು ಅವಕಾಶವನ್ನು ಕಲ್ಪಿಸಲಾಗಿದೆ.
2) ಪರಿಸರ ವಿಮೋಚನಾ ಸಮಿತಿ – ಪರಿಸರ ವಿಮೋಚನೆಗಾಗಿ ಅರ್ಜಿ ಸಲ್ಲಿಸಿದ ಯೋಜನೆಯ ಪ್ರಸ್ತಾವಿಕರಿಗೆ ಸಮಿತಿಯ ಮುಂದೆ ವಿವರಗಳನ್ನು ಮಂಡಿಸಲು ಅವಕಾಶ ಕಲ್ಪಿಸಲಾಗಿದೆ.
3) ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿ ಭಾರತ ಸರ್ಕಾರ ಹೊರಡಿಸಿರುವ ಪರಿಸರ ಆಘಾತ ಅಂದಾಜು ಅಧಿಸೂಚನೆಯಲ್ಲಿ ನಿರ್ಧಿಷ್ಠ ಕೈಗಾರಿಕೆಗಳು/ಸಂಸ್ಕರಣೆಗಳ ಬಗ್ಗೆ ಸಲಹೆ ಪಡೆಯಲು ಸಾರ್ವಜನಿಕ ವಿಚಾರಣೆ ನಡೆಸುವುದು ಕಡ್ಡಾಯವಾಗಿರುತ್ತದೆ.
4) ಇಲಾಖೆಯು ಪರಿಸರ ಪ್ರಶಸ್ತಿ ಪ್ರಧಾನಕ್ಕಾಗಿ ಅರ್ಹರನ್ನು ಆಯ್ಕೆ ಮಾಡಲು (ವ್ಯಕ್ತಿ/ಸಂಸ್ಥೆಗಳು) ಪ್ರತಿವರ್ಷ ಆಯ್ಕೆ ಸಮಿತಿಯನ್ನು ಇಲಾಖೆ ರಚಿಸುತ್ತದೆ. ಈ ಆಯ್ಕೆ ಸಮಿತಿಯಲ್ಲಿ ಇಲಾಖೆಯ ಸದಸ್ಯರಲ್ಲದೆ ಇಲಾಖೆಯ ಹೊರಗಿನ ಸದಸ್ಯರೂ ಇರುತ್ತಾರೆ.
5) ಅಪಾಯಕಾರಿ ತ್ಯಾಜ್ಯ ವಸ್ತು, ವೈದ್ಯಕೀಯ ತ್ಯಾಜ್ಯವಸ್ತುವಿನಂತಹ ವಿಶೇಷ ವಿಷಯ/ಪ್ರಕರಣಗಳನ್ನು ನಿರ್ವಹಿಸುವಲ್ಲಿ ವಿಜ್ಞಾನ ಹಾಗೂ ಇಂಜಿನಿಯರಿಂಗ್ ಹಿನ್ನೆಲೆಯುಳ್ಳ ಪರಿಣಿತರ ಸಲಹೆಯನ್ನು ಇಲಾಖೆ ಪಡೆಯುತ್ತದೆ.
6) ಇಲಾಖೆಯಲ್ಲಿನ ತಾಂತ್ರಿಕ ಕೋಶವು ತಾಂತ್ರಕ ವಿಷಯಗಳ ಬಗ್ಗೆ ಸಲಹೆ ನೀಡುತ್ತದೆ.

ಸಾರ್ವಜನಿಕ ವಿಚಾರಣಾ ಸಮಿತಿಯನ್ನು ಹೊರತುಪಡಿಸಿ ಉಳಿದ ಮೇಲ್ಕಂಡ ಸಮಿತಿಗಳು ನಡೆಸುವ ಸಭೆಗಳು ಸಾರ್ವಜನಿಕರಿಗೆ ತೆರವಿರುವುದಿಲ್ಲ. ಆದರೆ ಸಭೆ ನಡವಳಿಯನ್ನು ಮಾಹಿತಿ ಹಕ್ಕು ಕಾಯ್ದೆ 2005 ರೀತ್ಯಾ ಪಡೆಯಬಹುದು.

**(ix)** ***ಸಹಾಯಧನ ಇರುವ ಯೋಜನೆಗಳನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗುತ್ತದೆ; ಇದಕ್ಕೆ ಎಷ್ಟು ಹಣವನ್ನು ಗುರುತಿಸಲಾಗಿದೆ ಹಾಗು ಫಲಾನುಭವಿಗಳ ವಿವರಗಳು:***

ಸಧ್ಯಕ್ಕೆ ಇಲಾಖೆಯ ಕಾರ್ಯಯೋಜನೆಗಳು / ಯೋಜನೆಗಳನ್ನು ಕುರಿತಂತೆ ಸಹಾಯಧನ ನೀಡುವ ಕಾರ್ಯಕ್ರಮ ಯಾವುದು ಇರುವುದಿಲ್ಲ.

**(x)** **ಇಲಾಖೆ ನೀಡಿದ ರಿಯಾಯಿತಿ, ಪರವಾನಗಿ, ಸಮ್ಮತಿ, ಅಧಿಕಾರತ್ವದ (ಆತೋರೈಸೇಷನ್) ವಿವರಗಳು:**

ಕಾರ್ಯಕ್ರಮಗಳ/ಕಾರ್ಯಯೋಜನೆಗಳ ಅನುಷ್ಠಾನದಲ್ಲಿ ಇಲಾಖೆಯು ಪರಿಸರ ಕಾಯ್ದೆಗಳು ಹಾಗೂ ಅವುಗಳಡಿ ರಚಿಸಲಾಗಿರುವ ನಿಯಮಾವಳಿಗಳನ್ನು ಅನುಸರಿಸುತ್ತದೆ. ಮಾರ್ಗದರ್ಶಕ ಅಂಶಗಳನ್ನು ಪಾಲಿಸುತ್ತದೆ. ಕಾರ್ಯವಿಧಾನ ಕೈಪಿಡಿ, ಸರ್ಕಾರದ ವ್ಯವಹಾರ ಹಾಗೂ ಹಂಚಿಕೆ ನಿಯಮಗಳು ಹಾಗೂ ಸ್ಥಾಯೀ ಆದೇಶಗಳು, ಸುತ್ತೋಲೆ ಹಾಗೂ ಅಧಿಕೃತ ಜ್ಞಾಪನಗಳಲ್ಲಿನ ಸೂಚನೆಗಳನುಸಾರ ಎಲ್ಲ ಪ್ರಕರಣಗಳನ್ನು ಪರಿಶೀಲಿಸಲಾಗುತ್ತದೆ.

ಸಧ್ಯದಲ್ಲಿ ಕಾರ್ಯಕ್ರಮಗಳು/ ಕಾರ್ಯಯೋಜನೆಗಳ ಪ್ರಸ್ತಾವಿಕರಿಗೆ ಅಥವಾ ಇಲಾಖೆ ಕೈಗೊಂಡಿರುವ ಕಾರ್ಯಯೋಜನೆಗಳು /ಕಾರ್ಯಕ್ರಮಗಳಿಗೆ ಯಾವುದೇ ರಿಯಾಯಿತಿ/ ಸಹಾಯಧನಯನ್ನು ನೀಡಲಾಗುವುದಿಲ್ಲ.

**(xi)** ***ವಿದ್ಯುನ್ಮಾನದಲ್ಲಿ ಅಳವಡಿಸಿಕೊಂಡಿರುವ ಹಾಗೂ ಲಭ್ಯವಾಗುವ ಮಾಹಿತಿಯ ವಿವರಗಳು:***

ಇಲಾಖೆಯ ವೆಬ್ ಸೈಟ್ www.parisara.kar.nic.in ದಲ್ಲಿ ಇಲಾಖೆಗೆ ಸಂಬಂಧಿಸಿದ ಮುಖ್ಯ ಮಾಹಿತಿಯನ್ನು ಅಳವಡಿಸಲಾಗಿದೆ. ಕಡತಗಳು ಹಾಗೂ ಕಡತಗಳ

ಚಲನವಲನವನ್ನು ಸಚಿವಾಲಯ ಲ್ಯಾನ್ ಮೂಲಕ ಸಹ ಟ್ರಾಕ್ ಮಾಡಬಹುದು ಯಾ ನಿಗಾವಣೆ ಇಡಬಹುದು.

**(xii)** ***ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಇರುವ ಅನುಕೂಲಗಳು ಲೈಬ್ರರಿ/ವಾಚನ ಕೊಠಡಿಯನ್ನು ಸಾರ್ವಜನಿಕರ ಉಪಯೋಗಕ್ಕೆ ನಿರ್ವಹಿಸುತ್ತಿದ್ದಲ್ಲಿ ತೆರೆದಿರುವ ಸಮಯ:***

ಸಧ್ಯದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಇಲಾಖೆಯಲ್ಲಿ ಲೈಬ್ರರಿ ಯಾ ವಾಚನ ಕೊಠಡಿಯ ಸೌಲಭ್ಯ ಇರುವುದಿಲ್ಲ. ಕೆಲಸ ಮಾಡುವ ಎಲ್ಲ ದಿನಗಳಂದು ಕಛೇರಿ ವೇಳೆಯಲ್ಲಿ ಅಂದರೆ ಬೆಳಿಗ್ಗೆ 10 ರಿಂದ ಸಂಜೆ 5.30 ರವರೆಗೆ ಮಾಹಿತಿಯನ್ನು ಸಾರ್ವಜನಿಕರು ಮಾಹಿತಿ ಹಕ್ಕು ಕಾಯ್ದೆ 2005 ಅಡಿಯಲ್ಲಿ ಪಡೆಯಬಹುದು. ಹಾಗೂ ಮಾಹಿತಿಯನ್ನು ವೆಬ್‌ಸೈಟ್ ಮೂಲಕ ಸಹ ಪಡೆಯಬಹುದು.

***(xiii) ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗು ಪ್ರಥಮ ಮೇಲ್ಮನವಿ ಪ್ರಾಧಿಕಾರದ ಎಂದು ಗುರುತಿಸಲಾಗಿರುವ ಅಧಿಕಾರಿಗಳ ಹೆಸರು, ಪದನಾಮ ಹಾಗು ಇತರೆ ವಿವರಗಳು:***

| | |
|---|---|
| ಮಾಹಿತಿ ಹಕ್ಕು ಕಾಯ್ದೆ, 2005 ರ ಸಕ್ಷನ್ 5(1) ಅಡಿಯಲ್ಲಿ | ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ನೇಮಕ :<br><br><u>ಸಚಿವಾಲಯ ಮಟ್ಟದಲ್ಲಿ</u><br><br>**1.** ಸರ್ಕಾರದ ಅಧೀನ ಕಾರ್ಯದರ್ಶಿ (ಪರಿಸರ) ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.<br><br>**2.** ಯೋಜನಾ ಸಮನ್ವಯಾಧಿಕಾರಿ, ಇಂಡೋ ನಾರ್ವೇಜಿಯನ್ ಎನ್ವಿರಾನ್‌ಮೆಂಟ್ ಪ್ರೋಗ್ರಾಂಗೆ ಸಂಬಂಧಿಸಿದ ವಿಷಯಗಳು<br><br><u>ಕ್ಷೇತ್ರ ಮಟ್ಟದಲ್ಲಿ</u><br><br>ಪ್ರಾದೇಶಿಕ ನಿರ್ದೇಶಕರು (ಪರಿಸರ) ಬೆಳಗಾಂ, ಗುಲ್ಬರ್ಗ, ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಸಂಬಂಧಿಸಿದ ವಿಷಯಗಳು. |
| ಮಾಹಿತಿ ಹಕ್ಕು ಕಾಯ್ದೆ, 2005 ರ ಸಕ್ಷನ್ 5(2) ಅಡಿಯಲ್ಲಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಯಾಗಿ ನೇಮಕ :<br><br>1. ಶಾಖಾಧಿಕಾರಿ (ಪರಿಸರ–ಎ) ಶಾಖೆ)<br>2. ಶಾಖಾಧಿಕಾರಿ (ಪರಿಸರ–ಬಿ) ಶಾಖೆ. |
| ಮಾಹಿತಿ ಹಕ್ಕು ಕಾಯ್ದೆ, 2005 ರ ಸಕ್ಷನ್ 19(1) ಅಡಿಯಲ್ಲಿ | ಮೇಲ್ಮನವಿ ಪ್ರಾಧಿಕಾರದ ನೇಮಕ :<br><br>ಸರ್ಕಾರದ ಕಾರ್ಯದರ್ಶಿ (ಪರಿಸರ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ. |

** ಅಧಿಸೂಚನೆ ಸಂಖ್ಯೆ. ಅಪಜೀ 22 ಇಪಿಸಿ 2003 ದಿನಾಂಕ.3–9–2005, ದಿನಾಂಕ 10–10–2005 ರಲ್ಲಿ ತಿದ್ದುಪಡಿಯಾದಂತೆ.

# ಭಾಗ – II

## (xiii) ಇಲಾಖೆಯ ಅಧಿಕಾರಿ ನೌಕರ ವರ್ಗದ ಡೈರೆಕ್ಟರಿ

| ಕ್ರ.ಸಂ | ಹೆಸರು (ಶ್ರೀ/ಶ್ರೀಮತಿ) | ಪದನಾಮ |
|---|---|---|
| 1. | ಸದಾಶಿವಯ್ಯ | ಸರ್ಕಾರದ ಕಾರ್ಯದರ್ಶಿ |
| 2. | ಡಾ: ಎಂ.ಎಚ್. ಬಾಲಕೃಷ್ಣಯ್ಯ | ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ) |
| 3. | ಗಿರೀಶ್. ಕೆ | ವೈಜ್ಞಾನಾಧಿಕಾರಿ ಗ್ರೇಡ್ –1 |
| 4. | ಹೆಚ್. ಜಿ. ಸತ್ಯಮೂರ್ತಿ | ವೈಜ್ಞಾನಾಧಿಕಾರಿ ಗ್ರೇಡ್ –1 |
| 5. | ಬ್ರಿಜೇಶ್‌ಕುಮಾರ್ ದೀಕ್ಷಿತ್ | ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವೈಜ್ಞಾನಾಧಿಕಾರಿ ಗ್ರೇಡ್ –1 |
| 6. | ವಿಶ್ವನಾಥ್. ವಿ | ವೈಜ್ಞಾನಾಧಿಕಾರಿ ಗ್ರೇಡ್ –II |
| 7. | ದೊಡ್ಡ ಅಶ್ವತ್ಥನಾರಾಯಣ ಸ್ವಾಮಿ | ವೈಜ್ಞಾನಾಧಿಕಾರಿ ಗ್ರೇಡ್ – II |
| 8. | ಎನ್.ಆರ್.ಜಗನ್ಮಾತ | ಸರ್ಕಾರದ ಅಧೀನ ಕಾರ್ಯದರ್ಶಿ |
| 9. | ಕೆ.ಜಿ. ಶಶಿಕಲಾ | ಶಾಖಾಧಿಕಾರಿ ಪರಿಸರ – ಬಿ |
| 10. | ಬಿ.ಸಿ. ಪ್ರಕಾಶ್ | ಶಾಖಾಧಿಕಾರಿ ಪರಿಸರ – ಎ |
| 11. | ವಿ. ರಾಮಕೃಷ್ಣ | ಹಿರಿಯ ಸಹಾಯಕರು – ಬಿ |
| 12. | ಸಿ. ಶೀಲಾ | ಹಿರಿಯ ಸಹಾಯಕರು – ಎ |
| 13. | ಸಿ. ಮಂಚೇಗೌಡ | ಸಹಾಯಕರು – ಬಿ |
| 14. | ಟಿ. ಮಂಜುನಾಥ್ | ಸಹಾಯಕರು – ಎ |
| 15. | ಎಸ್.ವಿ.ಶ್ರೀನಿವಾಸನ್ | ಸಹಾಯಕರು – ಎ |
| 16. | ಎಸ್. ಕೆ. ಮಿರಾಸ್ಕರ್ | ಕಿರಿಯ ಸಹಾಯಕರು – ಬಿ |
| 17. | ಪ್ರೇಮಲತ | ಹಿರಿಯ ಶೀಘ್ರಲಿಪಿಗಾರರು ಕಾರ್ಯದರ್ಶಿಯವರ ಆಪ್ತ ಶಾಖೆ |
| 18. | ಬಿ.ನಾಗರಾಜ | ಶೀಘ್ರಲಿಪಿಗಾರರು ಕಾರ್ಯದರ್ಶಿಯವರ ಆಪ್ತ ಶಾಖೆ |
| 19. | ಖಾಲಿ | ಕಿರಿಯ ಸಹಾಯಕರು, ಕಾರ್ಯದರ್ಶಿಯವರ ಆಪ್ತ ಶಾಖೆ |
| 20. | ಖಾಲಿ | ಶೀಘ್ರಲಿಪಿಗಾರರು, ಹಿರಿಯ ನಿರ್ದೇಶಕರ ಆಪ್ತ ಶಾಖೆ, |
| 21. | ಶೈಲಜ. ಸಿ | ಶೀಘ್ರಲಿಪಿಗಾರರು, ತಾಂತ್ರಿಕ ಕೋಶ |
| 22. | ಶಿವಕುಮಾರ್ | ಸಹಾಯಕರು ಹಿರಿಯ ನಿರ್ದೇಶಕರ ಆಪ್ತ ಶಾಖೆ, (ತಾಂತ್ರಿಕ ಕೋಶ) |
| 23. | ಎಂ.ಎಸ್. ಮಂಜುಳ | ಶೀಘ್ರಲಿಪಿಗಾರರು ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ. |
| 24. | ಸುಕನ್ಯ | ದಲಾಯತ್ – ಕಾರ್ಯದರ್ಶಿಯವರ ಆಪ್ತ ಶಾಖೆ |
| 25. | ವೆಂಕಟಲಕ್ಷ್ಮಮ್ಮ | ಜಮೇದಾರ್ – ಪರಿಸರ ಎ |
| 26. | ಎಂ.ನಾಗರಾಜ್ | ದಲಾಯತ್ – ಬಿ ಶಾಖೆ |
| 27. | ಮೋಹನ್‌ದಾಸ್ | ಚಾಲಕರು, ಹಿರಿಯ ನಿರ್ದೇಶಕರ ಆಪ್ತ ಶಾಖೆ, |
| 28 | ಶಿವಣ್ಣಯ್ಯ | ದಲಾಯತ್ (ತಾಂತ್ರಿಕ ಕೋಶ) |
| 29. | ನಾಗರಾಜ್. ಟಿ | ದಲಾಯತ್ ಹಿರಿಯ ನಿರ್ದೇಶಕರ ಆಪ್ತ ಶಾಖೆ, (ತಾಂತ್ರಿಕ ಕೋಶ) |

**(xiv)** ***ಪ್ರತಿ ಅಧಿಕಾರಿ ಹಾಗು ನೌಕರರು ಪಡೆಯುವ ಮಾಸಿಕ ಸಂಭಾವನೆ ನಿಯಮಾವಳಿಯಲ್ಲಿ ಒದಗಿಸಲಾಗಿರುವ ಪರಿಹಾರ ಸೇರಿದಂತೆ.***

| ಕ್ರ.ಸಂ. | ಹೆಸರು (ಶ್ರೀ/ಶ್ರೀಮತಿ) | ಪದನಾಮ | ವೇತನ ಶ್ರೇಣಿ |
|---|---|---|---|
| 1. | ಸದಾಶಿವಯ್ಯ | ಸರ್ಕಾರದ ಕಾರ್ಯದರ್ಶಿ | 38,654/- |
| 2. | ಡಾ:ಎಂ.ಎಚ್. ಬಾಲಕೃಷ್ಣಯ್ಯ | ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ) | 31,000/- |
| 3. | ಗಿರೀಶ್. ಕೆ. | ವೈಜ್ಞಾನಾಧಿಕಾರಿ ಗ್ರೇಡ್ - 1 | 22,080/- |
| 4. | ಹೆಚ್. ಜಿ. ಸತ್ಯಮೂರ್ತಿ | ವೈಜ್ಞಾನಾಧಿಕಾರಿ ಗ್ರೇಡ್ - 1 | |
| 5. | ಬ್ರಿಜೇಶ್‌ಕುಮಾರ್ ದೀಕ್ಷಿತ್ | ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವೈಜ್ಞಾನಾಧಿಕಾರಿ ಗ್ರೇಡ್- 1 | |
| 6. | ವಿಶ್ವನಾಥ್ ವಿ. | ವೈಜ್ಞಾನಾಧಿಕಾರಿ ಗ್ರೇಡ್ - II | 15,320 |
| 7. | ದೊಡ್ಡ ಅಶ್ವತ್ಥನಾರಾಯಣ ಸ್ವಾಮಿ | ವೈಜ್ಞಾನಾಧಿಕಾರಿ ಗ್ರೇಡ್ - II | 6,026/- (ಸಂಚಿತ) |
| 8. | ಎನ್.ಆರ್.ಜಗನ್ನಾತ | ಸರ್ಕಾರದ ಅಧೀನ ಕಾರ್ಯದರ್ಶಿ | 16,040/- |
| 9. | ಕೆ.ಜಿ. ಶಶಿಕಲಾ | ಶಾಖಾಧಿಕಾರಿ ಪರಿಸರ - ಬಿ | 20,936/- |
| 10. | ಬಿ.ಸಿ. ಪ್ರಕಾಶ್ | ಶಾಖಾಧಿಕಾರಿ ಪರಿಸರ - ಎ | 17,444/- |
| 11. | ವಿ. ರಾಮಕೃಷ್ಣ | ಹಿರಿಯ ಸಹಾಯಕರು - ಬಿ | 10,856/- |
| 12. | ಸಿ. ಶೀಲಾ | ಹಿರಿಯ ಸಹಾಯಕರು - ಎ | 11,642/- |
| 13. | ಸಿ. ಮಂಚೇಗೌಡ | ಸಹಾಯಕರು - ಬಿ | 9,535/- |
| 14. | ಟಿ. ಮಂಜುನಾಥ್ | ಸಹಾಯಕರು - ಎ | 8,494/- |
| 15. | ಎಸ್.ವಿ.ಶ್ರೀನಿವಾಸನ್ | ಸಹಾಯಕರು - ಎ | 8,860/- |
| 16. | ಎಸ್. ಕೆ. ಮಿರಾಸ್ಕರ್ | ಕಿರಿಯ ಸಹಾಯಕರು - ಬಿ | 6,190/- |
| 17. | ಪ್ರೇಮಲತ | ಹಿರಿಯ ಶೀಘ್ರಲಿಪಿಗಾರರು ಕಾರ್ಯದರ್ಶಿಯವರ ಆಪ್ತ ಶಾಖೆ | 13,770/- |
| 18. | ಬಿ.ನಾಗರಾಜ | ಶೀಘ್ರಲಿಪಿಗಾರರು ಕಾರ್ಯದರ್ಶಿಯವರ ಆಪ್ತ ಶಾಖೆ | 11,581/- |
| 19. | ಖಾಲಿ | ಕಿರಿಯ ಸಹಾಯಕರು, ಕಾರ್ಯದರ್ಶಿಯವರ ಆಪ್ತ ಶಾಖೆ | - |
| 20. | ಖಾಲಿ | ಶೀಘ್ರಲಿಪಿಗಾರರು, ಹಿರಿಯ ನಿರ್ದೇಶಕರ ಆಪ್ತ ಶಾಖೆ, | - |
| 21. | ಶೈಲಜ. ಸಿ | ಶೀಘ್ರಲಿಪಿಗಾರರು ತಾಂತ್ರಿಕ ಕೋಶ | 7,720/- |
| 22. | ಶಿವಕುಮಾರ್ | ಸಹಾಯಕರು ಹಿರಿಯ ನಿರ್ದೇಶಕರ ಆಪ್ತ ಶಾಖೆ, (ತಾಂತ್ರಿಕ ಕೋಶ) | 8,960/- |
| 23. | ಎಂ.ಎಸ್. ಮಂಜುಳ | ಶೀಘ್ರಲಿಪಿಗಾರರು ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ. | 9,870/- |
| 24. | ಸುಕನ್ಯ | ದಲಾಯತ್- ಕಾರ್ಯದರ್ಶಿಯವರ ಆಪ್ತ ಶಾಖೆ | 4,976/- |
| 25. | ವೆಂಕಟಲಕ್ಷ್ಮಮ್ಮ | ಜಮೇದಾರ್ - ಪರಿಸರ ಎ | 6,806/- |
| 26. | ಎಂ.ನಾಗರಾಜ್ | ದಲಾಯತ್ - ಬಿ | 5,095/- |

| | | | |
|---|---|---|---|
| 27. | ಮೋಹನ್‌ದಾಸ್ | ಚಾಲಕರು, ಹಿರಿಯ ನಿರ್ದೇಶಕರ ಆಪ್ತ ಶಾಖೆ, | 9,220/- |
| 28. | ಶಿವಣ್ಣಯ್ಯ | ದಲಾಯತ್ (ತಾಂತ್ರಿಕ ಕೋಶ) | 5,366/- |
| 29. | ಟಿ. ನಾಗರಾಜ್ | ದಲಾಯತ್ ಹಿರಿಯ ನಿರ್ದೇಶಕರ ಆಪ್ತ ಶಾಖೆ, (ತಾಂತ್ರಿಕ ಕೋಶ) | 5,500/- |

**(xv)** ***ಆಯವ್ಯಯದಲ್ಲಿ ಗುರುತಿಸಲಾಗಿರುವ ಅನುದಾನದ ಶೀರ್ಷಿಕೆವಾರು ವಿಂಗಡನೆ, ಯೋಜನಾ ವಿವರಗಳು, ಉದ್ಧೇಶಿತ ವೆಚ್ಚಗಳು ಹಾಗು ವಿತರಣೆಯ ವಿವರಗಳು;***

*2005-06 ನೇ ಸಾಲಿನ ಯೋಜನಾ ಆಯವ್ಯಯದ ವಿವರಗಳು*

*(ರೂ. ಲಕ್ಷಗಳಲ್ಲಿ)*

| ಕ್ರ.ಸಂ. | ಯೋಜನೆಗಳ ಹೆಸರು (ಕೋಡ್ ಸಂಖ್ಯೆ ಸಹಿತವಾಗಿ) | ರಾಜ್ಯದ ಪಾಲು 2005-06 | ಕೇಂದ್ರದ ಪಾಲು 2005-06 | ಒಟ್ಟು | ಸೆಪ್ಟಂಬರ್ 2005 ವರೆಗಿನ ವೆಚ್ಚಗಳು |
|---|---|---|---|---|---|
| 1 | 2 | 3 | 4 | 5 | 6 |
| ಅ | ರಾಜ್ಯದ ಯೋಜನೆಗಳು | | | | |
| 1. | 3435-03-003-0-01 ಪರಿಸರ ಸಂಶೋಧನೆ ಶಿಕ್ಷಣ ಮತ್ತು ನವೀನ ಶೋಧನಾ ಯೋಜನೆಗಳು. 101 ಸಹಾಯಾನುದಾನ | 16.00 | - | 16.00 | 1.50 |
| 2. | 3435-03-003-0-14 ಕೆರೆ ಅಭಿವೃದ್ಧಿ ಪ್ರಾಧಿಕಾರ 139 ಪ್ರಧಾನ ಕಾಮಗಾರಿಗಳು | 30.00 | - | 30.00 | 15.00 |
| 3. | 3435-04-103-0-05 ಮಾಲಿನ್ಯ ನಿವಾರಣೆ 200 ನಿರ್ವಹಣೆ | 4.00 | - | 4.00 | - |
| 4. | 3435-60-800-0-03 ಕಡಲ ತೀರ ನಿರ್ವಹಣೆ | 55.00 | - | 55.00 | 45.63 |
| 5. | 3435-60-800-0-04 ರಾಜ್ಯದಲ್ಲಿನ ಜೈವಿಕ ವೈವಿಧ್ಯತೆಯ ಸಂರಕ್ಷಣೆ 059 ಇತರೆ ಖರ್ಚುಗಳು | 30.00 | - | 30.00 | 20.00 |
| 6. | 3435-60-800-0-06 ಪರಿಸರ ನ್ಯಾಯಶಾಸ್ತ್ರ 059 ಇತರೆ ಖರ್ಚುಗಳು | 15.00 | - | 15.00 | 5.00 |

| | | | | | |
|---|---|---|---|---|---|
| 7. | 3435-60-800-0-07<br>ಪರಿಸರ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ ಇಲಾಖೆಯ ಬಲವರ್ಧನೆ | 33.00 | – | 33.00 | 23.50 |
| 8. | 3435-60-800-0-08<br>ಇಕೋ ಕ್ಲಬ್ಸ್<br>059 ಇತರೆ ಖರ್ಚುಗಳು | 17.00 | – | 17.00 | – |
| | ಒಟ್ಟು ರಾಜ್ಯ ಪುರಸ್ಕೃತ ಯೋಜನೆಗಳು | **200.00** | – | **200.00** | **110.63** |

**ಆ) ಕೇಂದ್ರ ಪುರಸ್ಕೃತ ಯೋಜನೆಗಳು:**

| | | | | | |
|---|---|---|---|---|---|
| 1. | 3435-03-003-0-13<br>ರಾಷ್ಟ್ರ ಸರೋವರ ಸಂರಕ್ಷಣಾ ಯೋಜನೆ<br>139 ಪ್ರಧಾನ ಕಾಮಗಾರಿಗಳು | 110.00 | 260.00 | 370.00 | 150.00 |
| 2. | 3435-60-800-0-05<br>ರಾಷ್ಟ್ರೀಯ ನದಿ ಸಂರಕ್ಷಣಾ ಕಾರ್ಯಕ್ರಮಗಳು<br>132 ಬಂಡವಾಳ ವೆಚ್ಚಗಳು | 760.00 | 1775.00 | 2535.00 | 442.62 |
| | **ಒಟ್ಟು ಕೇಂದ್ರ ಪುರಸ್ಕೃತ ಯೋಜನೆಗಳು** | **870.00** | **2035.00** | **2905.00** | **592.62** |

**ಸಂಕ್ಷಿಪ್ತ**

| | | | | | |
|---|---|---|---|---|---|
| 1. | ರಾಜ್ಯದ ಯೋಜನೆಗಳು | 200.00 | – | 200.00 | 110.63 |
| 2. | ಕೇಂದ್ರ ಪುರಸ್ಕೃತ ಯೋಜನೆಗಳು | 870.00 | 2035.00 | 2905.00 | 592.62 |
| | ಒಟ್ಟು ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳು | 1070.00 | 2035.00 | 3105.00 | 703.25 |

# ಅನುಬಂಧ - 1

## ಸರ್ಕಾರದ ಕಾರ್ಯದರ್ಶಿಗಳು (ಪರಿಸರ)

## ಹಿರಿಯ ನಿರ್ದೇಶಕರು (ತಾಂತ್ರಿಕ ಕೋಶ)

---

ತಾಂತ್ರಿಕ ಕೋಶ

ಅಧೀನ ಕಾರ್ಯದರ್ಶಿ (ಪರಿಸರ)

| ವೈಜ್ಞಾನಾಧಿಕಾರಿ ಗ್ರೇಡ್-1 | ವೈಜ್ಞಾನಾಧಿಕಾರಿ ಗ್ರೇಡ್-1 | ವೈಜ್ಞಾನಾಧಿಕಾರಿ ಗ್ರೇಡ್-1 | ವೈಜ್ಞಾನಾಧಿಕಾರಿ ಗ್ರೇಡ್-1 | ವೈಜ್ಞಾನಾಧಿಕಾರಿ ಗ್ರೇಡ್-1 | ವೈಜ್ಞಾನಾಧಿಕಾರಿ ಗ್ರೇಡ್-11 | ವೈಜ್ಞಾನಾಧಿಕಾರಿ ಗ್ರೇಡ್-11 | ಶಾಖಾಧಿಕಾರಿಗಳು ಪರಿಸರ-ಎ | ಶಾಖಾಧಿಕಾರಿಗಳು ಪರಿಸರ-ಬಿ |
|---|---|---|---|---|---|---|---|---|
| | | | | | | | ಹಿರಿಯ ಸಹಾಯಕ<br>ಸಹಾಯಕ-1<br>ಸಹಾಯಕ-2<br>ಬೆರಳಚ್ಚುಗಾರರು<br>ಜಮೇದಾರ್ | ಹಿರಿಯ ಸಹಾಯಕ<br>ಸಹಾಯಕ-1<br>ಸಹಾಯಕ-2<br>ದಲಾಯತ್ |